15 November 2025 Saturday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 33 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಯುಧಿಷ್ಠಿರನಿಗೆ ಎಷ್ಟು ಹುಡುಕಿದರೂ ಕೆಟ್ಟವರು
ಸಿಗಲಿಲ್ಲವಂತೆ, ದುರ್ಯೋಧನನಿಗೆ
ಒಳ್ಳೆಯವರೇ ಕಾಣಲಿಲ್ಲವಂತೆ!
ಹೀಗಾಗಿ ಮನಸ್ಸು ವ್ಯಕ್ತಿತ್ವವನ್ನು ರೂಪಿಸುತ್ತದೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಜೀವನವನ್ನು
ಸಂಭ್ರಮಿಸಬೇಕಾದರೆ
ಯಾರನ್ನು ಸೋಲಿಸಲು
ಪ್ರಯತ್ನಿಸಬಾರದು,
ಎಲ್ಲರನ್ನೂ ಗೆಲ್ಲಲು
ಪ್ರಯತ್ನಿಸಬೇಕು."
ಮೈಲಾರ ಸಾವಿತ್ರಿಬಾಯಿ

# ಮೋದಿ–ನಿತೀಶ್ ಜೋಡಿಗೆ ಬಿ'ಹಾರ'

## ಭರ್ಜರಿ ಗೆಲುವು ಸಾಧಿಸಿದ ಎನ್‌ಡಿಎ ಮೈತ್ರಿ ಕೂಟ | ಕಾಂಗ್ರೆಸ್ 'ವಾಶ್ ಔಟ್'

**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಕೂಟ ಭರ್ಜರಿ ಗೆಲುವು ಸಾಧಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಜೋಡಿ ಐತಿಹಾಸಿಕ ಗೆಲುವು ಸಾಧಿಸುವ ಮೂಲಕ ಗೆದ್ದು ಬೀಗಿದ್ದಾರೆ.

ಮತ್ತೊಂದೆಡೆ ಕಾಂಗ್ರೆಸ್ ಮತ್ತು ಆರ್‌ಜೆಡಿ ನೇತೃತ್ವದ ಮಹಾಘಟ ಬಂಧನ್ ಮೈತ್ರಿ ಕೂಟಕ್ಕೆ ಮರ್ಮಾಘಾತ ಆಗಿದೆ. ತೇಜಸ್ವಿ ಯಾದವ್ ಅವರ ಮುಖ್ಯಮಂತ್ರಿ ಕುರ್ಚಿಯ ಕನಸು ಭಗ್ನವಾಗಿದೆ.

ಎನ್‌ಡಿಎ ಮೈತ್ರಿಕೂಟ 203 ಸ್ಥಾನಗಳಲ್ಲಿ ಗೆಲವು ಸಾಧಿಸಿದೆ. ಆದರೆ ಮಹಾಘಟಬಂಧನ್ ಮೈತ್ರಿಕೂಟ ಸುಮಾರು 34 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಇತರರು 6 ಸ್ಥಾನಗಳನ್ನು ಗೆದ್ದಿದ್ದಾರೆ.

ಈ ಬಾರಿ ಬಿಜೆಪಿ ಮತ್ತು ಜೆಡಿಯು ಎರಡೂ ಪಕ್ಷಗಳು ತಲಾ 101 ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. ಹೀಗಿದ್ದರೂ ಬಿಜೆಪಿ ಈ ಬಾರಿ ಐತಿಹಾಸಿಕ ಗೆಲುವು ಕಂಡಿದೆ. ಬಿಜೆಪಿ ಬಿಹಾರದಲ್ಲಿ ತನ್ನದೇ ದಾಖಲೆಯನ್ನು ಮುರಿದಿದೆ. 2020ರ ಚುನಾವಣೆಯಲ್ಲಿ ಕೇಸರಿ ಪಕ್ಷವು 110 ಸ್ಥಾನಗಳಲ್ಲಿ ಸ್ಪರ್ಧಿಸಿ 74 ಸ್ಥಾನಗಳನ್ನು ಗೆದ್ದಿತ್ತು. ಈಗ ಬಿಜೆಪಿ ತನ್ನ ದಾಖಲೆಯನ್ನು ಮುರಿದು ಬಿಹಾರದ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಬಿಜೆಪಿ 93, ಜೆಡಿಯು 82, ಎಲ್‌ಜೆಪಿ 20 ಮತ್ತು ಇತರರು 8 ಸ್ಥಾನಗಳಲ್ಲಿ ಜಯಗಳಿಸಿದ್ದಾರೆ. ಆದರೆ, ಮಹಾಘಟಬಂಧನ್ ಮೈತ್ರಿಕೂಟದ ಆರ್‌ಜೆಡಿ 27, ಕಾಂಗ್ರೆಸ್ 5 ಮತ್ತು ಲೆಫ್ಟ್ 2 ಸ್ಥಾನಗಳಲ್ಲಿ ಮಾತ್ರ ಗೆಲುವು ಸಾಧಿಸಿವೆ.



### ಮುಸ್ಲಿಂ ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು!

**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಮರೇ ಹೆಚ್ಚಿರುವ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು ಅಚ್ಚರಿ ಮೂಡಿಸಿದೆ. ರಾಜ್ಯದ ಒಟ್ಟು 36 ಕ್ಷೇತ್ರಗಳಲ್ಲಿ ಮುಸ್ಲಿಮರು ನಿರ್ಣಾಯಕರಾಗಿದ್ದಾರೆ. ಇದರಲ್ಲಿ ಬಿಜೆಪಿ 15 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಈ ಬಾರಿ ಚುನಾವಣೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಮತದಾರರು ಮತ ಚಲಾವಣೆ ಮಾಡಿದ್ದರು. ಹೀಗಾಗಿ ಮುಸ್ಲಿಂ ಮಹಿಳೆಯರು ಎನ್‌ಡಿಎ ಪರ ಮತ ಹಾಕಿರುವ ಸಾಧ್ಯತೆಯಿದೆ ಎನ್ನಲಾಗಿದೆ. ಓವೈಸಿ ಈ ಬಾರಿ ಯಾವುದೇ ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳದೇ 25 ಕ್ಷೇತ್ರಗಳಲ್ಲಿ ಪ್ರತ್ಯೇಕವಾಗಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದರು. ಇದು ಕಾಂಗ್ರೆಸ್ ಮತ್ತು ಆರ್‌ಜೆಡಿಗೆ ಭಾರೀ ಹೊಡೆತ ನೀಡಿದೆ. ಆರ್‌ಜೆಡಿ ಮತ್ತು ಕಾಂಗ್ರೆಸ್‌ಗೆ ಬರಬೇಕಿದ್ದ ಮತಗಳು ಓವೈಸಿ ಪಕ್ಷಕಕೆ ಬಿದ್ದ ಕಾರಣ ಮಹಾಘಟಬಂಧನ್‌ಗೆ ಹಿನ್ನಡೆಯಾಗಿದೆ ಎನ್ನಲಾಗಿದೆ.

### ಸಿಎಂ ಪಟ್ಟ ಯಾರಿಗೆ?

**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆ ಎನ್‌ಡಿಎ ಮೈತ್ರಿ ಕೂಟ ಭರ್ಜರಿ ಗೆಲುವು ಸಾಧಿಸಿದೆ. ಆದರೆ, ಈಗ ಬಿಹಾರದ ಬಾಸ್ ಯಾರಾಗ್ತಾರೆ ಅನ್ನುವ ಕುತೂಹಲ ಮೂಡಿದೆ. 10ನೇ ಬಾರಿಗೆ ಮುಖ್ಯಮಂತ್ರಿ ಗದ್ದುಗೆ ಏರಲು ನಿತೀಶ್ ಕುಮಾರ್ ಮುಂದಾಗಿ ದ್ದಾರೆ. ಆದರೆ ಇದಕ್ಕೆ ಬಿಜೆಪಿ ಮೈತ್ರಿ ಕೂಟ ಒಪ್ಪಿಕೊಳ್ಳುತ್ತಾ ಅನ್ನೋದನ್ನು ಕಾದುನೋಡಬೇಕಿದೆ. ಅಮಿತ್ ಶಾ ಭವಿಷ್ಯದಂತೆ ಎನ್‌ಡಿಎ ಪ್ರಚಂಡ ಬಹುಮತ ಪಡೆದಿದೆ. ಎಕ್ಸಿಟ್ ಪೋಲ್ ಫಲಿತಾಂಶಗಳು ನಿಜವಾಗಿದೆ. ಬಿಜೆಪಿ– ಜೆಡಿಯು ನೇತೃತ್ವದ ಎನ್‌ಡಿಎ ಮೈತ್ರಿಕೂಟ ನಿರಾಯಾಸವಾಗಿ ಅಧಿಕಾರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ನಿತೀಶ್ ಕುಮಾರ್ ಅವರಿಗೆ ವಯಸ್ಸಾಗಿರುವುದರಿಂದ ಅಧಿಕಾರವನ್ನು ನಿಭಾಯಿಸುವುದು ಕಷ್ಟ. ಹೀಗಾಗಿ ಸಿಎಂ ಕುರ್ಚಿ ಯಾರ ಪಾಲಾಗಲಿದೆ ಎಂಬುದು ನಿಗೂಢವಾಗಿದೆ.

### 'ಸೋಲಿನ ಪಾಠ'ಕ್ಕೆ ಕಾರ್ಯತಂತ್ರ: ಡಿಕೆಶಿ

**ಬೆಂಗಳೂರು:** ಬಿಹಾರ ವಿಧಾನಸಭಾ ಚುನಾವಣೆ ಸೋಲಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ



ಮತ್ತು ಇಂಡಿಯಾ ಬಣಕ್ಕೆ ಭವಿಷ್ಯದಲ್ಲಿ ಹೊಸ ಕಾರ್ಯತಂತ್ರ ರೂಪಿಸುವ ಅಗತ್ಯವಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯ ಪಟ್ಟಿದ್ದಾರೆ. ಈ ಫಲಿತಾಂಶ ತಮ್ಮ ಪಕ್ಷ ಮತ್ತು ಅದರ ಮಿತ್ರಪಕ್ಷಗಳಿಗೆ

ಪುಟ 2ಕ್ಕೆ

### ಮೋದಿ ನಾಯಕತ್ವಕ್ಕೆ ಯಶಸ್ಸು: ಬಿಎಸ್‌ವೈ



**ಶಿವಮೊಗ್ಗ:** ಬಿಹಾರದಲ್ಲಿ ಕಾಂಗ್ರೆಸ್ ನೆಲಕಚ್ಚಿದೆ. ಅಲ್ಲಿನ ಮತದಾರರು ಪ್ರಧಾನಿ ನರೇಂದ್ರ ಮೋದಿ ಅವರ ಕೆಲಸ ನೋಡಿ ಎನ್‌ಡಿಎ ಅನ್ನು ಗೆಲ್ಲಿಸಿದ್ದಾರೆ ಎಂದು ಮಾಜಿ ಸಿಎಂ ಬಿ.ಎಸ್.

ಪುಟ 2ಕ್ಕೆ

### ಬಿಹಾರದಲ್ಲೂ ಮತಕಳವು: ಸಿದ್ದರಾಮಯ್ಯ ಆರೋಪ

**ಬೆಂಗಳೂರು:** ಬಿಹಾರ ಚುನಾವಣೆಯಲ್ಲೂ



ಮತಕಳವು ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಆರೋಪಿಸಿದರು.

ಬಿಹಾರ ವಿಧಾನ ಸಭೆ

ಪುಟ 2ಕ್ಕೆ

### ಹುಲಿ ಮರಿ ಸೆರೆ ತಾಯಿಗೆ ಹುಡುಕಾಟ

**ಮೈಸೂರು:** ಹುಣಸೂರು ತಾಲ್ಲೂಕಿನ ಚಿಕ್ಕಡಿಗನಹಳ್ಳಿ ಗ್ರಾಮದಲ್ಲಿ ಹುಲಿ ಮರಿಯನ್ನು ಸೆರೆಹಿಡಿಯಲಾಗಿದೆ. ತಾಯಿ ಹುಲಿ ಹಾಗೂ ಮತ್ತೆರಡು ಮರಿಗಳಿಗಾಗಿ ಅರಣ್ಯ ಇಲಾಖೆ ಕಾರ್ಯಾಚರಣೆ ಮುಂದುವರಿಸಿದೆ.

ತಾಯಿ ಹುಲಿ ಮೂರು ಮರಿಗಳೊಂದಿಗೆ ಆಗಾಗ್ಗೆ ಗ್ರಾಮಸ್ಥರ ಕಣ್ಣಿಗೆ ಬೀಳುತ್ತಿತ್ತು. ಇದು ವ್ಯಾಪಕ ಭಯ ಮತ್ತು ಆತಂಕಕ್ಕೆ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿತ್ತು,

ಬಳಿಕ ಅರಣ್ಯ ಇಲಾಖೆ ಕೂಂಬಿಂಗ್ ಕಾರ್ಯಾಚರಣೆಯನ್ನು ಪ್ರಾರಂಭಿಸಿತ್ತು. ಇದರಂತೆ ಒಂದು ಗಂಡು ಮರಿಯನ್ನು ಸೆರೆಹಿಡಿಯಲಾಗಿದೆ. ತಾಯಿ ಹುಲಿ ಹಾಗೂ ಮರಿ ಹುಲಿಗಳಿಗಾಗಿ ಬಿಲ್ಕೆರೆ,

ಪುಟ 2ಕ್ಕೆ

### ಮತಕಳವು: ಪಶ್ಚಿಮ ಬಂಗಾಳದ ವ್ಯಕ್ತಿ ಬಂಧನ

**ಬೆಂಗಳೂರು:** ಆಳಂದ ಕ್ಷೇತ್ರದಲ್ಲಿ 2023ರ ವಿಧಾನಸಭಾ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಮತಕಳವು ಆರೋಪದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯ ವ್ಯಕ್ತಿಯನ್ನು ಬಂಧಿಸಿದೆ ಎಂದು ಇಲಾಖೆಯ ಮೂಲಗಳು ಶುಕ್ರವಾರ ತಿಳಿಸಿವೆ.

ನಾಡಿಯಾದ ಬಾಪಿ ಅದ್ಯ ಎಂಬ ಆರೋಪಿಯನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾವಣೆಯಾದ ಹಣದ ಜಾಡು ಹಿಡಿದ ನಂತರ ಬಂಧಿಸಲಾಗಿದೆ. ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಹಲವು ಮತಗಳನ್ನು ಅಳಿಸಲು ಆರೋಪಿ ಅರ್ಜಿ ಸಲ್ಲಿಸಿದ್ದರು. 27 ವರ್ಷದ ವ್ಯಕ್ತಿಯನ್ನು ಬಂಧಿಸಿ ಬೆಂಗಳೂರಿಗೆ ಕರೆತರಲಾಗಿದೆ. ವಿಚಾರಣೆಗಾಗಿ ಸಿಐಡಿ

ಪುಟ 2ಕ್ಕೆ

# ರಾಜ್ಯದಲ್ಲಿ 900 ಕೆಪಿಎಸ್ ಶಾಲೆ

## ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ: ಸಿದ್ದರಾಮಯ್ಯ

**ಬೆಂಗಳೂರು:** ರಾಜ್ಯದಲ್ಲಿ ಈ ವರ್ಷ ಒಟ್ಟು 900 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯುತ್ತಿದ್ದೇವೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಶ್ರಮಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಮ್ಮ ಸರ್ಕಾರ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಿದೆ. ವಾರ್ಷಿಕ 65,000 ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕೆ ನೀಡುತ್ತಿದ್ದೇವೆ. ಸರ್ಕಾರಿ ಶಾಲೆಗಳ ಮಕ್ಕಳು ಸ್ವಾಭಿಮಾನದಿಂದ ಸಮಾಜಮುಖಿಯಾಗಿ ಬೆಳೆಯಲು, ಉತ್ತಮ

ಪುಟ 2ಕ್ಕೆ




### ನೆಹರು ತೆಗುಳುವುದೇ ಬಿಜೆಪಿ ಕೆಲಸ

**ಬೆಂಗಳೂರು:** ಬಿಜೆಪಿಗೆ ಗಾಂಧಿ ಹಾಗೂ ನೆಹರು ಅವರನ್ನು ತೆಗಳುವುದೇ ಕೆಲಸ ಎಂದು ಬಿಜೆಪಿ ವಿರುದ್ಧ ಸಿಎಂ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ವಿಧಾನಸೌಧದಲ್ಲಿ ನೆಹರು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ ಲಭಿಸಿದಾಗ ದೇಶದ ಬಜೆಟ್ ಗಾತ್ರ 197 ಕೋಟಿ ರೂ. ಮಾತ್ರ ಇತ್ತು. ಎರಡು, ಮೂರು ವರ್ಷಗಳ ನಂತರ 4 ಅಂಕಿಗಳ ಹಂತಕ್ಕೆ ತಲುಪಿತು ಎಂದು ಹೇಳಿದರು.

ಕೃಷಿ, ನೀರಾವರಿ, ಕೈಗಾರಿಕೆಗಳಲ್ಲಿ ಆಸಕ್ತಿ ಹೊಂದಿದ್ದ ನೆಹರೂ ಅವರು ದೇಶವನ್ನು, ವೈಜ್ಞಾನಿಕವಾಗಿ, ವೈಚಾರಿಕವಾಗಿ

ಪುಟ 2ಕ್ಕೆ

# ಮಹಿಳಾ ಗ್ಯಾರಂಟಿಯೇ 'ಗೇಮ್ ಚೇಂಜರ್'

## ಚುನಾವಣೆಗೂ ಮುನ್ನವೇ ಮಹಿಳೆಯರಿಗೆ 10 ಸಾವಿರ ರೂ. ಕೊಡುಗೆ

**ಪಾಟ್ನಾ:** ಬಿಹಾರ ಚುನಾವಣಾ ಫಲಿತಾಂಶ ಸಂಪೂರ್ಣ ಎನ್‌ಡಿಎನತ್ತ ವಾಲುವುದಕ್ಕೆ ಮಹಿಳೆಯರಿಗೆ ಘೋಷಣೆ ಮಾಡಿದ್ದ 10,000 ರೂ. ಗ್ಯಾರಂಟಿ ಯೋಜನೆಯೇ ಪ್ರಮುಖ ಗೇಮ್ ಚೇಂಜರ್ ಎಂದು ರಾಜಕೀಯ ತಜ್ಞರು ವಿಶ್ಲೇಷಣೆ ಮಾಡಿದ್ದಾರೆ.

ಕಳೆದ ಆಗಸ್ಟ್ 29ರಂದು ಮಹಿಳಾ ಗ್ಯಾರಂಟಿ ಯೋಜನೆ ಘೋಷಣೆ ಮಾಡಿ, 1.5 ಕೋಟಿ ಮಹಿಳಾ ಮತದಾರರ ಖಾತೆಗೆ ಚುನಾವಣೆಗೂ ಮೊದಲೇ 10,000 ರೂ. ವರ್ಗಾವಣೆ ಮಾಡಿದ್ದರು. ಅನೇಕ ಉದ್ಯೋಗಸ್ಥ ಮಹಿಳೆಯರು ಸಹ ಇದರ ಪ್ರಯೋಜನ ಪಡೆದರು. ಅಲ್ಲದೇ ಬಿಹಾರದಲ್ಲಿ ಒಟ್ಟು 7.43 ಕೋಟಿ ಮತದಾರರ ಪೈಕಿ 3.50 ಕೋಟಿ ಮಹಿಳಾ ಮತದಾರರಿದ್ದಾರೆ. ಇದರಲ್ಲಿ ಶೇ.71ಕ್ಕೂ ಹೆಚ್ಚು ಮಹಿಳೆಯರು ಮತ ಚಲಾಯಿಸಿದ್ದಾರೆ. ಇದು ಎನ್‌ಡಿಎ ಗೆಲುವಿಗೆ ಪ್ರಮುಖ ತಿರುವು ಅಂತ ವಿಶ್ಲೇಷಣೆ ಮಾಡಲಾಗಿದೆ.

ಚುನಾವಣೆಗೆ ಒಂದು ತಿಂಗಳು ಬಾಕಿಯಿರುವಾಗಲೇ ನಿತೀಶ್ ಕುಮಾರ್ ಸರ್ಕಾರ ಬಿಹಾರದ ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಗೆ ಚಾಲನೆ ನೀಡಿತ್ತು. ಈ ಯೋಜನೆ ಅಡಿಯಲ್ಲಿ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ತಲಾ 10,000 ರೂ.ಗಳನ್ನ ವರ್ಗಾವಣೆ ಮಾಡಲಾಗಿತ್ತು. 4ರಿಂದ 5 ಕೋಟಿ ಕುಟುಂಬಗಳಿಗೆ ಇದರಿಂದ ಸಹಾಯ ಆಗಿತ್ತು. ಅಲ್ಲದೇ ಉದ್ಯೋಗ ಸೃಷ್ಟಿಸುವಲ್ಲಿ ಯಶಸ್ವಿಯಾದ ಮಹಿಳೆಯರಿಗೆ ಹೆಚ್ಚುವರಿಯಾಗಿ 2 ಲಕ್ಷ ರೂ.ವರೆಗೆ ಬಡ್ಡಿ ರಹಿತ ಸಾಲವನ್ನೂ ಘೋಷಿಸಿದ್ದರು. ಇದು ನಿತೀಶ್ ಸರ್ಕಾರದ ಮೇಲೆ ಬಹುದೊಡ್ಡ ಪರಿಣಾಮ ಬೀರಿದೆ ಎನ್ನಲಾಗಿದೆ.

ಈ ಯೋಜನೆ ಎಲ್ಲರಿಗೂ ಸಿಕ್ಕಿರಲಿಲ್ಲ. ಯೋಜನೆಗೆ ಅರ್ಜಿ ಸಲ್ಲಿಸುವ ಮಹಿಳೆಯರು ಬಿಹಾರದ ಶಾಶ್ವತ ನಿವಾಸಿಯಾಗಿರಬೇಕು. ಕನಿಷ್ಠ ಪಿಯುಸಿ, ಐಟಿಐ, ಪಾಲಿಟೆಕ್ನಿಕ್ ಡಿಪ್ಲೊಮಾ ಅಥವಾ ತತ್ಸಮಾನ ಉತ್ತೀರ್ಣರಾಗಿರಬೇಕು. 18ರಿಂದ 50 ವರ್ಷಗಳ ವಯಸ್ಸಿನವರಾಗಿರಬೇಕು. ವ್ಯಾಪಾರ ಘಟಕ ಮಾಲೀಕತ್ವ ಅಥವಾ ಪಾಲುದಾರಿಕೆ ಸಂಸ್ಥೆಯಾಗಿರಬೇಕು ಎಂದು ಷರತ್ತು ವಿಧಿಸಲಾಗಿತುತ.

ಪುಟ 2ಕ್ಕೆ

### 10ನೇ ಬಾರಿಗೆ ನಿತೀಶ್ ಕಣ್ಣು!

ನಿತೀಶ್ ಕುಮಾರ್ ಈವರೆಗೆ 9 ಬಾರಿ ಮುಖ್ಯಮಂತ್ರಿಯಾಗಿ 20 ವರ್ಷಗಳಿಗೂ ಹೆಚ್ಚು ಕಾಲ ಅಧಿಕಾರ ನಡೆಸಿದ್ದಾರೆ. ಇದೀಗ ಎನ್‌ಡಿಎ ಮೈತ್ರಿಕೂಟದಿಂದ ಸಿಎಂ ಆಗಿ ಅಧಿಕಾರ ಸ್ವೀಕರಿಸಲು ಉತ್ಸಾಹಿಯಾಗಿದ್ದಾರೆ. ಆದರೆ ಬಿಜೆಪಿ ಹೊಸ ಮುಖಕ್ಕೆ ಮಣೆಹಾಕಲು ಎದುರು ನೋಡುತ್ತಿದೆ ಎನ್ನಲಾಗಿದೆ.

2000ನೇ ಇಸವಿಯ ಮಾರ್ಚ್ 3ರಂದು ನಿತೀಶ್ ಫಸ್ಟ್ ಟೈಮ್ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ್ದರು. 7 ದಿನಗಳಲ್ಲಿ ಮತ್ತೆ ರಾಜೀನಾಮೆ ನೀಡಬೇಕಾಯಿತು. ಮತ್ತೆ 2005ರ ನವೆಂಬರ್‌ನಲ್ಲಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ನಿತೀಶ್ ಸಿಎಂ ಆದರು. 2010ರಲ್ಲಿ 3ನೇ ಬಾರಿಗೆ ಸಿಎಂ ಆದರು, ಆದರೆ 2014ರಲ್ಲಿ

ಪುಟ 2ಕ್ಕೆ

# ಜಗತ್ತಿನಲ್ಲಿ ಯಾವುದೂ ಶಾಶ್ವತ ಅಲ್ಲ

## ಪ್ರೀತಿಯಿಂದ ಬದುಕಿ: ಸಾಲುಮರದ ಅಜ್ಜಿಯ ಅಂತಿಮ ಸಂದೇಶ

**ಬೆಂಗಳೂರು:** ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ಯಾರಿಗೂ ತೊಂದರೆ, ಹಿಂಸೆಯಾಗದಂತೆ ಪ್ರೀತಿಯಿಂದ ಬದುಕಿ ಎಂದು ಅಜ್ಜಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರು ಅಂತಿಮ ಕ್ಷಣದಲ್ಲಿ ಭಾವುಕರಾಗಿ ರಾಜ್ಯದ ಜನತೆಗೆ ಸಂದೇಶ ನೀಡಿದ್ದಾರೆ.

ಪತ್ರದ ಮೂಲಕ ಭಾವನಾತ್ಮಕ ಸಂದೇಶ ನೀಡಿರುವ ಅವರು, ಎಲ್ಲರಿಗೂ ಸತಿಪತಿ ಭಾಗ್ಯ ಇರಲಿ, ಮಕ್ಕಳ ಭಾಗ್ಯವಿರಲಿ, ನಿಮ್ಮ ಮನೆ ಚೆನ್ನಾಗಿರಲಿ, ದೇಶ ಚೆನ್ನಾ ಗಿರಲಿ, ಮಕ್ಕಳಿಗೆಲ್ಲ ಒಳ್ಳೆಯ ವಿದ್ಯೆ ಸಿಗಲಿ, ಎಲ್ಲರೂ ಗಿಡ ಮರಗಳನ್ನು ಬೆಳೆಸಿ ಎಂದು ಪ್ರೀತಿಯ ನನ್ನ ನಾಡಿನ ಜನತೆಗೆ ನಿಮ್ಮ ಪ್ರೀತಿಯ ಅಜ್ಜಿ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಮಾಡುವ ನಮಸ್ಕಾರಗಳು ಎಂದು ತಿಳಿಸಿದ್ದಾರೆ.

ಈ ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ, ಇರುವಷ್ಟು ದಿನ ಯಾರಿಗೂ ತೊಂದರೆ, ಹಿಂಸೆಯಾಗದಂತೆ ಪ್ರೀತಿಯಿಂದ ಬದುಕಿ. ಬಡವ, ಶ್ರೀಮಂತ, ಭಿಕ್ಷುಕ, ಅಸಹಾಯಕ ಎನ್ನದೇ ಎಲ್ಲರೂ ಒಂದೇ ತರಹ ಬದುಕಿ. ಎಲ್ಲ ರನ್ನು ಗೌರವಿಸಿ, ಪ್ರೀತಿಸಿ. ದೇಶವನ್ನು ಪ್ರೀತಿಸಿ, ದೇಶ ಚೆನ್ನಾಗಿದ್ದರೆ ಎಲ್ಲರೂ ಚಂದ. ಚಿಕ್ಕವರಾಗಲಿ, ದೊಡ್ಡವ ರಾಗಲಿ, ಬಡವರಾಗಲಿ, ಶ್ರೀಮಂತರಾಗಲಿ, ಗಿಡ ನೆಟ್ಟು ಮರಗಳನ್ನಾಗಿ ಬೆಳೆಸಿರಿ. ಗೋ ಕಟ್ಟೆಗಳನ್ನು ಕಟ್ಟಿಸಿ, ಕೆರೆ ಕಟ್ಟಿಸಿ, ಮೂಕ ಪ್ರಾಣಿಗಳಿಗೆ ನೀರಿನ ವ್ಯವಸ್ಥೆ ಮಾಡಿಸಿ, ಹಣ್ಣು ಬಿಡುವ ಮರಗಳನ್ನು ಬೆಳೆಸಿ, ಹಕ್ಕಿಪಕ್ಷಿಗಳ ಆಧಾರ ವಾಗಲಿ, ದೇಶದಲ್ಲಿರುವ ಎಲ್ಲರಿಗೂ ಒಳ್ಳೆಯದಾಗಲಿ, ದೇಶ ಚೆನ್ನಾಗಿರಲಿ ಬಡವನನ್ನು ಕಂಡು ಭಿನ್ನ ಭೇಧ ಮಾಡಬೇಡಿ. ಮನುಷ್ಯರೆಲ್ಲ ಒಂದೇ,

ಪುಟ 2ಕ್ಕೆ






### ವೃಕ್ಷಮಾತೆ ತಿಮ್ಮಕ್ಕ ಇನ್ನಿಲ್ಲ

**ಬೆಂಗಳೂರು:** ಉಸಿರಾಟದ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ನಿಧನರಾದರು. ಅವರಿಗೆ 114 ವರ್ಷ ವಯಸ್ಸಾಗಿತ್ತು. ಬೆಂಗಳೂರಿನ ಜಯನಗರದ ಖಾಸಗಿ ಆಸ್ಪತ್ರೆಯಲ್ಲಿ ತಿಮ್ಮಕ್ಕ ಕೊನೆಯುಸಿರೆಳೆದರು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ 1911 ಜೂನ್ 30ರಂದು ಜನಿಸಿದ್ದ ಅವರು, ವೃಕ್ಷಮಾತೆ ಎಂದೇ ಪ್ರಸಿದ್ಧಿ ಪಡೆದಿದ್ದರು. ನಂತರ ಮಾಗಡಿ ತಾಲೂಕಿನ ಚಿಕ್ಕಯ್ಯ ಅವರನ್ನು ವಿವಾಹವಾದರು. ದುರದೃಷ್ಟವಶಾತ್, ಇವರಿಗೆ ಮಕ್ಕಳಿ ರಲಿಲ್ಲ. ಹೀಗಾಗಿ ತಮಗೆ ಮಕ್ಕಳಿರದ ದುಃಖವನ್ನು ಮರೆಯಲು ರಸ್ತೆಯ ಬದಿಯಲ್ಲಿ ಆಲದ ಸಸಿಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದ್ದರು.

ಅನಕ್ಷರಸ್ಥೆಯಾಗಿದ್ದರೂ ಪರಿಸರ ಸಂರಕ್ಷಣೆಯಲ್ಲಿ ತಿಮ್ಮಕ್ಕ ಅವರ ಮಹತ್ತರ ಸಾಧನೆಗೆ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ರಾಜ್ಯೋತ್ಸವ ಪ್ರಶಸ್ತಿ, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶಾಲಾಕ್ಷಿ ಪ್ರಶಸ್ತಿ, 2010ನೇ ಸಾಲಿನ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಸೇರಿ 2019ರಲ್ಲಿ ಪದ್ಮಶ್ರೀ ಪ್ರಶಸ್ತಿ ಪ್ರಶಸ್ತಿಗೂ ಇವರು ಪಾತ್ರರಾಗಿದ್ದಾರೆ. 2020 ರಲ್ಲಿ ಕರ್ನಾಟಕ ಕೇಂದ್ರೀ ಯ ವಿಶ್ವವಿದ್ಯಾಲಯ ತಿಮ್ಮಕ್ಕನವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಮರ, ಗಿಡಗಳನ್ನು ತಮ್ಮ ಮಕ್ಕಳಂತೆಯೇ ಪ್ರೀತಿಸುತ್ತಿದ್ದರು. ತಿಮ್ಮಕ್ಕ ಅವರಿಗೆ 1995ರಲ್ಲಿ ರಾಷ್ಟ್ರೀಯ ಪೌರಪ್ರಶಸ್ತಿ, 1997ರಲ್ಲಿ ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, 2019ರಲ್ಲಿ ಪದ್ಮಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ನಾಡೋಜ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.



### ದೇಶದ ಭವಿಷ್ಯ ರೂಪಿಸಲು ಸಹಕಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ



### ಮಕ್ಕಳು ಮೌಢ್ಯದಿಂದ ದೂರ ಇರಲಿ

**ಬೆಂಗಳೂರು:** ದೇಶದ ಭವಿಷ್ಯ ರೂಪಿಸುವುದು ವೈಚಾರಿಕ– ವೈಜ್ಞಾನಿಕ ಮನೋಭಾವದ ಮಕ್ಕಳು. ಮಕ್ಕಳು ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಮೌಢ್ಯ, ಕಂದಾಚಾರದಿಂದ ದೂರ ಉಳಿಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಿಧಾನಸೌಧದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಶುಕ್ರವಾರ ಪಂಡಿತ್ ಜವಾಹರಲಾಲ್ ಜನ್ಮ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ರಾಜ್ಯ ಮಟ್ಟದ ಮಕ್ಕಳ ದಿನಾಚರಣೆ ಮತ್ತು ಪೋಷಕರ–ಶಿಕ್ಷಕರ ಮಹಾ ಸಭೆ ಉದ್ಘಾಟಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಮಕ್ಕಳೇ ಭಾರತದ ಭವಿಷ್ಯ ಎನ್ನುವ ದೂರದೃಷ್ಟಿ ನೆಹರೂ ಅವರಿಗೆ ಇತ್ತು. ಹೀಗಾಗಿ ಮಕ್ಕಳಲ್ಲಿ ವೈಜ್ಞಾನಿಕ ಮನೋಧರ್ಮ ರೂಪಿಸುವ ಶಿಕ್ಷಣಕ್ಕೆ ಒತ್ತು ನೀಡಿದ್ದರು. ನೆಹರೂ ತಮ್ಮ ಯೌವ್ವನದ 3,200ಕ್ಕೂ ಹೆಚ್ಚು ದಿನಗಳನ್ನು ಜೈಲಿನಲ್ಲಿ ಕಳೆದ ಹೋರಾಟಗಾರರು. ಶ್ರೀಮಂತ ಕುಟುಂಬದಿಂದ ಬಂದಿದ್ದರೂ ದೇಶದ ಸ್ವಾತಂತ್ಕಾಗಿ ಸೆರೆಮನೆ ಸೇರಿದರು. ದೇಶದ ಪ್ರಧಾನಿಯಾಗಿ ಕೃಷಿ, ವಿಜ್ಞಾನ, ನೀರಾವರಿ, ತಂತ್ರಜ್ಞಾನ ಸೇರಿ ದೇಶದ ಸಮಗ್ರ ಅಭಿವೃದ್ಧಿಗೆ ಅಡಿಪಾಯ ಹಾಕಿದರು. ಐಐಟಿ, ಏಮ್ಸ್ ಸೇರಿ ಅಣೆಕಟ್ಟು, ಕೈಗಾರಿಕೆಗಳನ್ನೆಲ್ಲಾ ಮಾಡಿಸದವರು ನೆಹರೂ. ಆದರೆ, ದೇಶದ ಸ್ವಾತಂ ಹೋರಾಟದಲ್ಲಿ ಭಾಗವಹಿಸದೆ ಬ್ರಿಟಿಷರ ಜೊತೆ ಕೈಜೋಡಿಸಿದ್ದವರು ನೆಹರೂ ಮತ್ತು ಗಾಂಧಿಯನ್ನು ಟೀಕಿಸುತ್ತಾರೆ. ಇದನ್ನು ಮಕ್ಕಳಿಗೆ ಶಿಕ್ಷಕರು ಹಾಗೂ ಪೋಷಕರು ಅರ್ಥ ಮಾಡಿಸಬೇಕು ಎಂದು ಸಿಎಂ ಕರೆ ನೀಡಿದರು. ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ ಇರುವ ಮಕ್ಕಳ ಮೇಲೆ ದೇಶದ ಅಭಿವೃದ್ಧಿ ಮತ್ತು ಭವಿಷ್ಯದ ಕನಸನ್ನು ನೆಹರೂ ಕಟ್ಟಿಕೊಂಡಿದ್ದರು. ಪ್ರತಿಭೆ ಯಾರ ಸ್ವತ್ತೂ ಅಲ್ಲ ಎಂದು ಹೇಳಿದರು.

### ಉತ್ತಮ ಆಡಳಿತಕ್ಕೆ ಸಿಕ್ಕ ಗೆಲುವು: ಮೋದಿ

**ನವದೆಹಲಿ:** ಬಿಹಾರದಲ್ಲಿ ಉತ್ತಮ ಆಡಳಿತಕ್ಕೆ ಮತ್ತು ಅಭಿವೃದ್ಧಿಗೆ ಗೆಲುವು ದೊರೆತಿದೆ. ಇದು ಸಾರ್ವಜನಿಕ ಕಲ್ಯಾಣದ ಗೆಲುವು. ಸಾಮಾಜಿಕ ನ್ಯಾಯದ ಗೆಲುವು ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

2025ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎಗೆ ಐತಿಹಾಸಿಕ ಮತ್ತು ಅಭೂತಪೂರ್ವ ಗೆಲುವಿನಿಂದ ಆಶೀರ್ವದಿಸಿದ ಬಿಹಾರದ ಜನರಿಗೆ ನನ್ನ ಹೃತ್ಪೂರ್ವಕ ಧನ್ಯವಾದ. ಈ ಸಾರ್ವಜನಿಕ ತೀರ್ಪು ನಮಗೆ ಜನರಿಗೆ ಸೇವೆ ಸಲ್ಲಿಸಲು ಮತ್ತು ಬಿಹಾರಕ್ಕಾಗಿ ಹೊಸ ಸಂಕಲ್ಪದೊಂದಿಗೆ ಕೆಲಸ ಮಾಡಲು ಶಕ್ತಿ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

## ಮೊದಲ ಪುಟದಿಂದ

### ಮೋದಿ ನಾಯಕತ್ವಕ್ಕೆ ಯಶಸ್ಸು:

ಯಡಿಯೂರಪ್ಪ ಅಭಿಪ್ರಾಯಪಟ್ಟರು. ಮಾಧ್ಯಮಗಳ ಜೊತೆ ಅವರು ಮಾತನಾಡಿ, ಮೋದಿ ಮತ್ತು ಅಮಿತ್ ಷಾ ಅವರ ಯೋಜನೆ ಯಶಸ್ಸು ಕಂಡಿದೆ. ಮೋದಿಯವರ ನಾಯಕತ್ವಕ್ಕೆ ಮೆಚ್ಚುಗೆ ಸಿಕ್ಕಿದೆ. ಮೋದಿ ಮತ್ತು ಅಮಿತ್ ಷಾ ಚರ್ಚೆ ಮಾಡಿ ಬಿಹಾರ ಸಿಎಂ ಆಯ್ಕೆ ಮಾಡಲಿದ್ದಾರೆ. ರಾಹುಲ್ ಗಾಂಧಿ ನಾಯಕತ್ವವನ್ನು ಜನರು ತಿರಸ್ಕಾರ ಮಾಡಿದ್ದಾರೆ ಎಂದು ಹೇಳಿದರು. ರಾಜ್ಯದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ವಿಚಾರವಾಗಿ, ಶೀಘ್ರವೇ ಈ ಸಮಸ್ಯೆಗೆ ಪರಿಹಾರ ಸಿಗಲಿದೆ. ಕಬ್ಬು ಬೆಳೆಗಾರರ ಸಮಸ್ಯೆಗೆ ಸರ್ಕಾರ ಸ್ಪಂದಿಸಬೇಕಿದೆ ಎಂದು ಸಲಹೆ ನೀಡಿದರು.

### ಬಿಹಾರದಲ್ಲೂ ಮತಕಳವು: ಸಿದ್ದರಾಮಯ್ಯ ಆರೋಪ

ಚುನಾವಣೆ ಫಲಿತಾಂಶದ ನಂತರ ಮಾತನಾಡಿದ ಅವರು, ಬಿಹಾರದಲ್ಲಿ ಕಾಂಗ್ರೆಸ್–ಆರ್‌ಜೆಡಿ ಮೈತ್ರಿಗೆ ಹಿನ್ನಡೆಯಾಗಿದೆ. ಆದರೆ, ಜನಾದೇಶವನ್ನು ನಾವು ಒಪ್ಪಿಕೊಳ್ಳಲೇಬೇಕು. ಈ ಹಿನ್ನಡೆಗೆ ಕಾರಣ ಏನು ಎಂದು ಗೊತ್ತಿಲ್ಲ. ನಾನು ಬಿಹಾರಕ್ಕೆ ಹೋಗಿಲ್ಲ. ಈ ಕುರಿತು ಮಾಹಿತಿ ಪಡೆಯಲು ಯತ್ನಿಸುತ್ತೇನೆ ಎಂದು ಹೇಳಿದ್ದಾರೆ. ಬಿಹಾರದಲ್ಲಿ ಚುನಾವಣೆಗೂ ಮುನ್ನ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಮತಕಳವು ಆರೋಪದ ಬಗ್ಗೆ ಪ್ರಶ್ನಿಸಿದಾಗ, 'ಬಿಹಾರದಲ್ಲೂ ಮತ ಕಳ್ಳತನ ನಡೆದಿದೆ' ಎಂದು ಹೇಳಿದರು.

### ಜಗತ್ತಿನಲ್ಲಿ ಯಾವುದೂ ಶಾಶ್ವತ ಅಲ್ಲ

ಹಸಿದವರಿಗೆ ಅನ್ನ ಕೊಡಿ. ನಾನು ಮಾಡಿದ ಗಿಡ ನೆಡುವ,

ಉಳಿಸುವ ಕಾರ್ಯವನ್ನು ನಿರಂತರವಾಗಿ ಮುಂದುವರಿಸಿ ಎಂದು ಮನವಿ ಮಾಡಿಕೊಂಡಿದ್ದಾರೆ. ನನ್ನ ಮಗನಾದ ಉಮೇಶ ದೇಶದಲ್ಲೆಲ್ಲ ಗಿಡ ನೆಡುವ ಮತ್ತು ನಡೆಸುವ ಕಾರ್ಯ ಮಾಡುತ್ತಾ ಸಾಗು. ಮತ್ತೊಮ್ಮೆ ಎಲ್ಲರಿಗೂ ದೇವರು ಒಳ್ಳೆಯದು ಮಾಡಲಿ, ನನ್ನ ಪತಿ ದೇವರ ಆಶೀರ್ವಾದ ಮತ್ತು ನನ್ನ ಆಶೀರ್ವಾದ ನನ್ನ ಮಗನ ಮೇಲಿರಲಿ ಎಂದು ಅವರು ತಿಳಿಸಿದ್ದಾರೆ.

### ಮಹಿಳಾ ಗ್ಯಾರಂಟಿಯೇ 'ಗೇಮ್ ಚೇಂಜರ್'

ನಿತೀಶ್ ಸರ್ಕಾರ ಮಹಿಳಾ ಪರ ಯೋಜನೆಗಳನ್ನ ಘೋಷಿಸಿದ್ದು ಇದೇ ಮೊದಲೇನಲ್ಲ. ಈ ಹಿಂದೆಯೂ ವಿದ್ಯಾರ್ಥಿನಿಯರಿಗೆ ಉಚಿತ ಸೈಕಲ್ ವಿತರಣೆ, ಮದ್ಯ ಮಾರಾಟ ನಿಷೇಧ, ವಿದ್ಯಾರ್ಥಿ ವೇತನ, ಪಂಚಾಯಿತಿ ಸ್ಥಾನಗಳಲ್ಲಿ ಶೇ.50 ಮೀಸಲಾತಿ, ಸರ್ಕಾರಿ ಉದ್ಯೋಗಗಳಲ್ಲಿ ಶೇ.50 ಮೀಸಲಾತಿ ಕೊಡುಗೆಗಳನ್ನ ಜಾರಿಗೊಳಿಸಿದ್ದರು. ಇದರಿಂದ ಸಹಜವಾಗಿಯೇ ಮಹಿಳಾ ಮತದಾರರು ಎನ್‌ಡಿಎ ಕಡೆಗೆ ವಾಲಿದ್ದಾರೆ ಎನ್ನುತ್ತಿದ್ದಾರೆ ತಜ್ಞರು.

### 'ಸೋಲಿನ ಪಾಠ'ಕ್ಕೆ ಕಾರ್ಯತಂತ್ರ: ಡಿಕೆಶಿ

'ಪಾಠ' ಎಂದಿರುವ ಅವರು, ಜನರೇ ಈ ಆದೇಶವನ್ನು ನೀಡಿ ದ್ದಾರೆ. ಇದು ನಮಗೆ ಒಂದು ಪಾಠ. ಭವಿ ಷ್ಯದಲ್ಲಿ ನಾವು ಕಾಂಗ್ರೆಸ್ ಪಕ್ಷ ಮತ್ತು ಇಂಡಿಯಾ ಬಣಕ್ಕೆ ಹೊಸ ಕಾರ್ಯತಂತ್ರವನ್ನು ರೂಪಿಸುತ್ತೇವೆ ಎಂದು ನಾನು ಭಾವಿಸುತ್ತೇನೆ ಎಂದು ತಿಳಿಸಿದರು. ಬಿಹಾರ ಚುನಾವಣೆಯಲ್ಲಿ ಎನ್‌ಡಿಎ ಸಾಧನೆಗೆ ಮಹಿಳೆಯರಿಗೆ 10,000 ರೂ. ಡಿಬಿಟಿ ಮತ್ತು ಮಹಿಳಾ ಮತದಾರರ ಹೆಚ್ಚಳವೇ ಕಾರಣವೇ ಎಂದು ಕೇಳಿದಾಗ, ಅದನ್ನು ನೋಡೋಣ. ನನಗೆ ಇನ್ನೂ ವಿವರವಾದ ವರದಿ ಸಿಕ್ಕಿಲ್ಲ. ವರದಿ ಸಿಕ್ಕ ನಂತರ ಮತ್ತೆ ಮಾತನಾಡುತ್ತೇನೆ ಎಂದು ಹೇಳಿದರು.

### ಮತಕಳವು: ಪಶ್ಚಿಮ ಬಂಗಾಳದ ವ್ಯಕ್ತಿ ಬಂಧನ

ಅವರನ್ನು ವಶಕ್ಕೆ ಪಡೆದಿದೆ. ಬಿ.ಆರ್ ಪಾಟೀಲ್ ಮತ್ತು ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರು ಮತ ಅಳಿಸುವಿಕೆ ಪ್ರಯತ್ನಗಳ ಬಗ್ಗೆ ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿ ಗಮನಕ್ಕೆ ತಂದಿದ್ದರು. ನಂತರ ತನಿಖೆಯನ್ನು ಸಿಐಡಿಗೆ ಸರ್ಕಾರ ವಹಿಸಿತ್ತು.

### 10ನೇ ಬಾರಿಗೆ ನಿತೀಶ್ ಕಣ್ಣು!

ಬಿಜೆಪಿಯಿಂದ ಬೇರ್ಪಟ್ಟರು. 2015ರಲ್ಲಿ ಆರ್‌ಜೆಡಿ ಮೈತ್ರಿಕೂಟದ ಜೊತೆಗೂಡಿ ಗೆದ್ದು ಸಿಎಂ ಆದರು. 2017ರಲ್ಲಿ ಮಹಾ ಮೈತ್ರಿಕೂಟದಿಂದ ಬೇರ್ಪಟ್ಟು ಎನ್‌ಡಿಎ ಸೇರಿಕೊಂಡರು. 2020ರ ಚುನಾವಣೆಯಲ್ಲಿ ಮತ್ತೆ ನಿತೀಶ್ ಸಿಎಂ ಆದರು. ಆದರೆ 2022ರಲ್ಲಿ ಎನ್‌ಡಿಎ ತೊರೆದು ಆರ್‌ಜೆಡಿ ಜೊತೆಗೂಡಿ ಸರ್ಕಾರ ರಚಿಸಿದ್ದರು. 2024ರಲ್ಲಿ ಆರ್‌ಜೆಡಿ ಜೊತೆಗಿನ ಮೈತ್ರಿ ಕಡಿದುಕೊಂಡ ನಿತೀಶ್ ಬಿಜೆಪಿ ಮೈತ್ರಿಯೊಂದಿಗೆ 9ನೇ ಬಾರಿಗೆ ಸಿಎಂ ಆದರು.

### ಹುಲಿ ಮರಿ ಸೆರೆ ತಾಯಿಗೆ ಹುಡುಕಾಟ

ಚಿಕ್ಕಡಿಗನಹಳ್ಳಿ ಮತ್ತು ಇಲವಾಲ ಹೋಬಳಿ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಮುಂದುವರೆದಿದೆ. ಈ ನಡುವೆ ದೊಡ್ಡಕಾಡನಹಳ್ಳಿ, ರತ್ನಳ್ಳಿ, ಹೊಸಕಮನಕೊಪ್ಪಲು, ಹಳೆಕಮನಕೊಪ್ಪಲು ಮತ್ತು ಎರಪ್ಪನಕೊಪ್ಪಲು ಸೇರಿದಂತೆ ಹತ್ತಿರದ ಹಳ್ಳಿಗಳಲ್ಲಿ ಹುಲಿ ಮತ್ತು ಅದರ ಮರಿಗಳು ಓಡಾಡುತ್ತಿರುವುದಾಗಿ ಹೇಳಲಾಗಿದೆ. ಕಾರ್ಯಾಚರಣೆ ಮುಗಿಯುವವರೆಗೆ ಅರಣ್ಯ ಪ್ರದೇಶಗಳಿಗೆ ಹೋಗುವುದನ್ನು ತಪ್ಪಿಸಲು ಮತ್ತು ಜಾಗರೂಕರಾಗಿರಲು ಅರಣ್ಯ ಇಲಾಖೆ ನಿವಾಸಿಗಳಿಗೆ ಮನವಿ ಮಾಡಿದೆ.

### ರಾಜ್ಯದಲ್ಲಿ 900 ಕೆಪಿಎಸ್ ಶಾಲೆ

ಶಿಕ್ಷಣ ಪಡೆಯಲು ನಮ್ಮ ಸರ್ಕಾರ ಸಕಲ ಸವಲತ್ತುಗಳನ್ನೂ ನೀಡುತ್ತಿದೆ. ಇಂದಿರಾ ಕಿಟ್, ಶೂ, ಸಮವಸ್ತ್ರ, ಮೊಟ್ಟೆ, ಬಾಳೆ ಹಣ್ಣು, ಪಠ್ಯ ಪುಸ್ತಕ, ಸ್ಕಾಲರ್ಶಿಪ್ ಇವೆಲ್ಲವನ್ನೂ ಬಡವರ ಮಕ್ಕಳಿಗಾಗಿ ಸರ್ಕಾರ ಒದಗಿಸುತ್ತಿದೆ. ಇದರ ಅನುಕೂಲ ಪಡೆದು ಮಕ್ಕಳು ದೇಶದ ಆಸ್ತಿಯಾಗಿ ರೂಪುಗೊಳ್ಳಬೇಕು. ನಾನೂ ಸರ್ಕಾರಿ ಶಾಲೆಯಲ್ಲಿ ಓದಿಯೇ ಸಿಎಂ ಆಗಿದ್ದೀನಿ ಎಂದರು.

### ನೆಹರು ತೆಗುಳುವುದೇ ಬಿಜೆಪಿ ಕೆಲಸ

ಬೆಳೆಸುವ ಪ್ರಯತ್ನ ಮಾಡಿದರು. ಮಹಾತ್ಮ ಗಾಂಧಿ, ನೆಹರು ಅವರು ದೇಶಕ್ಕೆ ಸ್ವಾತಂತ್ರ ತಂದುಕೊಟ್ಟವರು. ಅವರನ್ನು ತೆಗಳಿ, ಇಲ್ಲದ ಆರೋಪಗಳನ್ನು ಹೊರಿಸುವುದೇ ಬಿಜೆಪಿ ಕೆಲಸ. ನರೇಂದ್ರ ಮೋದಿ, ಬಿಜೆಪಿ, ಆರ್‌ಎಸ್‌ಎಸ್‌ನವರು ಗಾಂಧಿ ಮತ್ತು ನೆಹರು ಅವರನ್ನು ಹೀಯಾಳಿಸುವುದನ್ನೇ ಉದ್ಯೋಗ ಮಾಡಿಕೊಂಡಿದ್ದಾರೆ ಎಂದು ಕಿಡಿಕಾರಿದರು.


### ಮೂರು ಹೆಸರಿನವರೂ ಒಬ್ಬರೇ

ಮೈಸೂರು ನಜರ್‌ಬಾದ್ ಶಾಲಿವಾಹನ ರಸ್ತೆ 2ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಲೇಟ್ ವೆಂಕಟಾಚಲಪತಿ ಅವರ ಪತ್ನಿ **ಪ್ರಮದಕುಮಾರಿ** ಆದ ನನ್ನ ಹೆಸರು ಆಧಾರ್ ಕಾರ್ಡ್ ಮತ್ತು ಓಟರ್ ಐಡಿಯಲ್ಲಿ **ಬಿ.ಎ.ಪ್ರಮದ** ಎಂದು ನಮೂದಾಗಿರುತ್ತದೆ. ಹಾಗೂ ಕೆ.ಆರ್.ಸರ್ಕಲ್‌ನಲ್ಲಿರುವ ಎಸ್.ಕೆ.ಪಿ.ಸಿ. ಬ್ಯಾಂಕ್‌ನ ಷೇರಿನಲ್ಲಿ **ಬಿ.ಎ.ಪ್ರಮದ ಕುಮಾರಿ** ಎಂದು ಸಹಿ ಮಾಡಿರುತ್ತೇನೆ. ಮೇಲ್ಕಂಡ ಮೂರು ಹೆಸರಿನವರೂ ಒಬ್ಬರೇ ಎಂದು ನೋಟರಿ ಎಲ್.ಎನ್. ರಾಜೇಂದ್ರನ್ ಅವರ ಸಮಕ್ಷಮ ಘೋಷಿಸಿಕೊಂಡಿರುತ್ತೇನೆ.

ಸಹಿ/–ಬಿ.ಎ.ಪ್ರಮದಕುಮಾರಿ


# ಮಹದೇಶ್ವರರ ವಿಚಾರಧಾರೆಗಳ ಜೀವನದಲ್ಲಿ ಅಳವಡಿಸಿಕೊಂಡರೆ ಶಾಂತಿ, ನೆಮ್ಮದಿ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮೈಸೂರು: ನಾವು ದೇವರೆಂದು ಪೂಜಿಸುತ್ತಿರುವ ಮಹದೇಶ್ವರ ಅವರು ಹೇಳಿರುವ ವಿಚಾರಧಾರೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಶಾಂತಿ, ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ. ನಾವೆಲ್ಲರೂ ಒಂದೇ ಎನ್ನುವ ಭಾವನೆ ಎಲ್ಲರಲ್ಲೂ ಬರಬೇಕು ಎಂಬುದು ನಮ್ಮ ಆಶಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಜಿಲ್ಲಾಡಳಿತ ಮತ್ತು ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ರವರ ಸಂಯುಕ್ತ ಆಶ್ರಯದಲ್ಲಿ "ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಂಜನಗೂಡು ತಾಲ್ಲೂಕು ಹದಿನಾರು ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಹದಿನಾರು ಗ್ರಾಮದ ಶ್ರೀ ಬಿಳಿಕೆರೆ ಮಹದೇಶ್ವರ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಸಮಾರಂಭ"ವನ್ನು ಉದ್ಘಾಟಿಸಿ ಮಾತನಾಡಿದರು.

ಮಹದೇಶ್ವರ ಅವರು ಜನರ ಬದುಕಿನ ನೋವು, ಕಷ್ಟಗಳನ್ನು ಜಾನಪದ ಸಾಹಿತ್ಯದ ಮೂಲಕ ಹೇಳುತ್ತಿದ್ದರು. ಬದುಕನ್ನು ಅರ್ಥ ಪೂರ್ಣವಾಗಿ ಹೇಳುವುದರ ಮೂಲಕ ಜನರನ್ನು ಜಾಗೃತಿ ಗೊಳಿಸುತ್ತಿದ್ದರು. ಮಹದೇಶ್ವರ ಜಾನಪದ ಸಾಹಿತ್ಯದ ನಾಯಕ, ಸಮಾಜದ ಸುಧಾರಣೆ ಮೂಲಕ ಜನರನ್ನು ಎಚ್ಚರಗೊಳಿಸುತ್ತಿದ್ದರು. ಪೂಜಾ ಕೈಂಕರ್ಯಗಳು . ಜನರನ್ನೆಲ್ಲ ಒಂದೇ ಕಡೆ ಸೇರಿಸಿ ನಾವೆಲ್ಲರೂ ಒಂದೇ ಎನ್ನುವುದನ್ನು ತಿಳಿಸುವುದು, ಯಾವುದೇ ತಾರತಮ್ಯ ಮಾಡದೇ ಮನುಷ್ಯರೆಲ್ಲರೂ ಒಂದೇ ಎಂಬುದು ಮಹದೇಶ್ವರರ ತತ್ವವಾಗಿತ್ತು ಎಂದು ತಿಳಿಸಿದರು.

ನಾನು ರಾಜಕೀಯಕ್ಕೆ ಬಂದ ನಂತರ ನನಗೆ ನನ್ನ ತಾಯಿ ಊರಿನ ಜನರಿಗೆ ನೀನು ಒಳ್ಳೆಯದನ್ನು ಮಾಡಬೇಕು. ರಸ್ತೆ , ದೇವಸ್ಥಾನ, ಕುಡಿಯುವ ನೀರಿನ ವ್ಯವಸ್ಥೆ ಉತ್ತಮವಾಗಿ ಮಾಡಿಕೊಡಬೇಕು ಎಂಬ ಹೇಳಿದರು.ಅದರಂತೆ ಊರಿನ ಅಭಿವೃದ್ಧಿ ಮಾಡುತ್ತಾ ಬರುತ್ತಿದ್ದೇನೆ. ರಾಜಕೀಯದಲ್ಲಿ ನನ್ನ ತಾಯಿಯೇ ನನಗೆ ಪ್ರೇರಣೆ ಎಂದು ಹೇಳಿ ಅವರ ತಾಯಿಯನ್ನು ಸ್ಮರಿಸಿದರು.

ಹದಿನಾರು ಗ್ರಾಮದ ಪಕ್ಕದಲ್ಲಿ ಚಿತ್ರನಗರಿ, ಕಾರ್ಖಾನೆಗಳು ಸ್ಥಾಪನೆಯಾಗಲಿದ್ದು, ಪ್ರವಾಸಿತಾಣವಾಗುವುದರ ಜೊತೆಗೆ ಧಾರ್ಮಿಕ ಕ್ಷೇತ್ರವಾಗುವುದು ಕಂಡಿತಾ ಆದ್ದರಿಂದ ಈ ಸ್ಥಳದ ಸ್ವಚ್ಛತೆಯನ್ನು ಕಾಪಾಡಬೇಕು, ಸರ್ಕಾರ ಜನರ ಅನುಕೂಲಕ್ಕಾಗಿ ಅನೇಕ ಸೌಕರ್ಯಗಳನ್ನು ನೀಡಿದೆ. ಅದನ್ನು ಪಡೆದುಕೊಳ್ಳಬೇಕು ಎಂದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ನಾನು ಹುಟ್ಟಿದ ಊರಲ್ಲಿ ಈ ದೇವಸ್ಥಾನದ ಅಭಿವೃದ್ಧಿ ನೋಡಿ ಸಂತಸವಾಗುತ್ತಿದೆ, ಯಾರೇ ಆಗಲಿ ಒಂದು ಉನ್ನತ ಸ್ಥಾನಕ್ಕೆ ಹೋದಾಗ ತಮ್ಮ ಗ್ರಾಮಕ್ಕೆ ಒಂದಷ್ಟು ಒಳ್ಳೆಯ ಕೆಲಸ ಮಾಡಬೇಕು, ನನ್ನ ಹುಟ್ಟೂರಿಗೆ ಏನಾದರೂ ಮಾಡಬೇಕು ಎಂಬ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಅದೇ ರೀತಿ ಮಹದೇವಪ್ಪ ಅವರು ಸ್ವಗ್ರಾಮಕ್ಕೆ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ, ಈ ಹಿಂದೆ ಲೋಕೋಪಯೋಗಿ ಸಚಿವರಾಗಿದ್ದಾಗ ಅನೇಕ ರಸ್ತೆಗಳು ಸೇತುವೆ ಮಾಡಿದ್ದಾರೆ ಗಬ್ಬುನಾರುತ್ತಿದ್ದ ಸ್ಥಳವನ್ನು ಉದ್ಯಾನವನ ನಿರ್ಮಾಣ ಮಾಡಿ ಈ ಗ್ರಾಮದ ಜನರಿಗೆ ಕೊಡುಗೆ ನೀಡಿದ್ದಾರೆ ಎಂದು ಸಚಿವರನ್ನು ಕೊಂಡಾಡಿದರು.

ಸುಸಜ್ಜಿತವಾದ ದೇವಾಲಯವನ್ನು ಊರಿನ ಜನರು ಸ್ವಚ್ಛವಾಗಿ ಕಾಪಾಡಿಕೊಂಡು ಹೋಗಬೇಕು ನಾವು ಇದೇ ರೀತಿ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಗ್ರಾಮಕ್ಕೆ ಮಾಡುತ್ತೇವೆ, ಏನೇ ಮಾಡಿದರೂ ಹುಟ್ಟೂರಿನ ಋಣ ತೀರಿಸಲು ಆಗದು ಎಂದು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ವಿಷ್ಣುವರ್ಧನ್, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಅಸೀಫ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಮೈಸೂರು ಮೃಗಾಲಯದ ಅಧ್ಯಕ್ಷ ರಂಗಸ್ವಾಮಿ, ಹದಿನಾರು ಗ್ರಾಮಪಂಚಾಯಿತಿಯ ಅಧ್ಯಕ್ಷೆ ಸಣ್ಣತಾಯಮ್ಮ ಸೇರಿ ಮತ್ತಿತರರು ಉಪಸ್ಥಿತರಿದ್ದರು.

# ಭೂಸ್ವಾಧೀನ ವಿರೋಧಿಸಿ ಚಳವಳಿ

## ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಜೈಲ್ ಭರೋ ಚಳವಳಿ

ರಾಮನಗರ: ಬಿಡದಿ ಹೋಬಳಿಯಲ್ಲಿ ಎಐ ಟೌನ್ ಶಿಪ್ ಯೋಜನೆಗಾಗಿ ಭೂ ಸ್ವಾಧೀನ ಮತ್ತು ರೈತರ ಮೇಲೆ ಪ್ರಕರಣ ದಾಖಲಿಸಿರುವ ಕ್ರಮ ಖಂಡಿಸಿ ಶೀಘ್ರದಲ್ಲಿಯೇ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಜೈಲ್ ಭರೋ ಚಳವಳಿ ನಡೆಸಲಾಗುವುದು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷರಾದ ಮಾಜಿ ಶಾಸಕ ಎ.ಮಂಜುನಾಥ್ ಎಚ್ಚರಿಕೆ ನೀಡಿದರು.

ಬಿಡದಿ ಹೋಬಳಿಯ ಬೈರಮಂಗಲ ವೃತ್ತದಲ್ಲಿ ಬಿಡದಿ ಟೌನ್ ಶಿಪ್ ಯೋಜನೆ ವಿರೋಧಿಸಿ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರ ಭೂ ಹಿತ ರಕ್ಷಣಾ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಧರಣಿಯಲ್ಲಿ ಪಾಲ್ಗೊಂಡ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಬೈರಮಂಗಲದಿಂದ ಸಹಸ್ರಾರು ರೈತರು ಎತ್ತಿನ ಗಾಡಿ, ಟ್ರ್ಯಾಕ್ಟರ್ , ಜಾನುವಾರುಗಳ ಸಮೇತ ಬಿಡದಿ ಮಾರ್ಗವಾಗಿ ರಾಮನಗರಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕುತ್ತೇವೆ. ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಕೂಡ ಜೈಲ್ ಭರೋ ಚಳವಳಿಯಲ್ಲಿ ಭಾಗಿಯಾಗುತ್ತಾರೆ. 3600 ರೈತ ಕುಟುಂಬ ಜೈಲಿಗೆ ಹೋಗಲು ಸಿದ್ಧವಾಗಿದ್ದು, ತಾಕತ್ತಿದ್ದರೆ ಬಂಧಿಸಿ ತೋರಿಸಲಿ ಎಂದು ಸವಾಲು ಹಾಕಿದರು.



### ರೈತರು ಹೆದರುತ್ತಾರೆ ಎಂಬುದು ಡಿಸಿ ಅವರ ಭ್ರಮೆ

ಬಡ ರತರಿಗೆ ನ್ಯಾಯ ದೊರಕಿಸದ ಬೇಕಾದ ಜಿಲ್ಲಾಧಿಕಾರಿಗಳೇ ಕಬಳಿಸುವವರ ಪರವಾಗಿ ನಿಂತಿದ್ದಾರೆ. ಅವರ ಏಕ ಪಕ್ಷೀಯವಾದ ನಡವಳಿಕೆಯನ್ನು ರೈತರು ಯಾರು ಪ್ರಶ್ನೆ ಮಾಡಬಾರದಾ. ರೈತರನ್ನು ಬಂಧಿಸಿ ಪ್ರಕರಣ ದಾಖಲಿಸಿದರೆ ಹೆದರುತ್ತಾರೆ ಎಂಬುದು ನಿಮ್ಮ ಭ್ರಮೆ. ರೈತರು ಹೆದರುವ ಜಾಯಮಾನದವರಲ್ಲ ಎಂದು ಕಿಡಿಕಾರಿದರು.

ಇಲ್ಲಿನ ಜಿಲ್ಲಾಧಿಕಾರಿಗಳು ಕಚೇರಿ ಸುತ್ತಲು ನಿಷೇಧಾಜ್ಞೆ ಹಾಕಿಕೊಂಡು ಆಡಳಿತ ನಡೆಸುತ್ತಿದ್ದಾರೆ. ಇದು ರಾಜ್ಯದ ಬೇರೆ ಯಾವ ಜಿಲ್ಲೆಗಳಲ್ಲು ಇಲ್ಲ. ಜಿಲ್ಲಾಧಿಕಾರಿಗಳಿಗೆ ರೈತರು ಇಲ್ಲಿವರೆಗೆ ಗೌರವ ಕೊಟ್ಟಿಕೊಂಡು ಬಂದಿದ್ದಾರೆ. ಇನ್ನು ಮುಂದೆ ಜಿಲ್ಲಾಧಿಕಾರಿಗಳ ದೌರ್ಜನ್ಯ ಮತ್ತು ಪೊಲೀಸರ ಬಲ ಪ್ರಯೋಗಕ್ಕೆ ಹೆದರುವುದಿಲ್ಲ. ಈ ಯೋಜನೆ ವಿರೋಧಿಸಿ 3200 ರೈತರು ತಕರಾರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಜಿಲ್ಲಾಧಿಕಾರಿಗಳು ಎಷ್ಟು ರೈತರು ತಕರಾರು ಅರ್ಜಿ ಹಾಕಿದ್ದಾರೆ, ಎಷ್ಟು ರೈತರು ಭೂಮಿ ಕೊಡಲು ಮುಂದೆ ಬಂದಿದ್ದಾರೆ ಎಂಬುದನ್ನು ಬಹಿರಂಗ ಪಡಿಸಲಿ. ಜಮೀನು ಉಳಿಸಿಕೊಳ್ಳಲು ಯಾವ ಹಂತದ ಹೋರಾಟಕ್ಕೂ ರೈತರೊಂದಿಗೆ ನಾವೆಲ್ಲರು ಸಿದ್ಧರಾಗಿದ್ದೇವೆ ಎಂದು ಎ.ಮಂಜುನಾಥ್ ಹೇಳಿದರು.

### ಜಿಲ್ಲಾಧಿಕಾರಿಗಳ ವಿರುದ್ಧವೂ ಆರೋಪ

ಬಿಡದಿ ಟೌನ್ ಶಿಪ್ ಯೋಜನೆಗಾಗಿ ಭೂ ಸ್ವಾಧೀನ ಪಡಿಸುತ್ತಿರುವ ಭಾಗಗಳಲ್ಲಿ ಜಿಲ್ಲಾಧಿಕಾರಿಗಳೇ ಬೇನಾಮಿ ಹೆಸರಿನಲ್ಲಿ ಭೂಮಿ ಖರೀದಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸುವಂತೆ ರಾಜ್ಯಪಾಲರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಲೋಕಾಯುಕ್ತರಿಗೆ ದೂರು ಸಲ್ಲಿಸುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿಗಳು 300 ರಿಂದ 400 ಎಕರೆ ಭೂಮಿಯನ್ನು ಬೇನಾಮಿ ಹೆಸರಿನಲ್ಲಿ ಖರೀದಿ ಮಾಡಿರುವ ದಾಖಲೆಗಳಿವೆ. ಲೋಕಾಯುಕ್ತರಿಂದ ತನಿಖೆಯಾದರೆ ಸತ್ಯಾಂಶ ಬಹಿರಂಗವಾಗುತ್ತದೆ. ರಾಜಕಾರಣಿಗಳು 1 ಸಾವಿರ ಎಕರೆಗೂ ಹೆಚ್ಚಿನ ಭೂಮಿಯನ್ನು ಬೇನಾಮಿ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ. ಇನ್ನು ಜಿಲ್ಲಾಧಿಕಾರಿಗಳಿಗೆ ಜಮೀನು ಕೊಡಿಸಿರುವ ಏಜೆಂಟ್ ಗಳೇ ನಮಗೆ ದಾಖಲೆಗಳನ್ನು ನೀಡಿದ್ದಾರೆ. ರೈತರ ಮೂಲಕವೇ ಜಿಲ್ಲಾಧಿಕಾರಿಗಳ ವಿರುದ್ಧ ಲೋಕಾಯುಕ್ತರಿಗೆ ದೂರು ಸಲ್ಲಿಸುತ್ತೇನೆ ಎಂದು ಹೇಳಿದರು. ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಭ ರತರ ಭೂ ಹಿತ ರಕ್ಷಣಾ ಸಂಘದ ಅಧ್ಯಕ್ಷ ಅರಳಾಳಸಂದ್ರ ಕೆ.ರಾಮಯ್ಯ, ನಾಗರಾಜು, ಆನಂದ್ ಮತ್ತಿತರರು ಇದ್ದರು.

# ನಾಳೆ ಅಧಿಕಾರ ಸ್ವೀಕಾರ ಸಮಾರಂಭ

ಮಂಡ್ಯ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮಂಡ್ಯ ಜಿಲ್ಲಾ ಶಾಖೆಯ ವತಿಯಿಂದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಮತ್ತು ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ 2005 – 2 ನೇ ಸಾಲಿನ ನೂತನ ಆಡಳಿತ ಮಂಡಳಿಯ ಅಧಿಕಾರ ಸ್ವೀಕಾರ ಸಮಾರಂಭವನ್ನು ನ.16ರ ಸಂಜೆ 6ಗಂಟೆಗೆ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಮತ್ತೀಕೆರೆ ಜಯರಾಮ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ ನಾಲ್ಕು ಅವಧಿಯಿಂದ ನಮ್ಮ ತಂಡ ಅಧಿಕಾರ ಪಡೆಯಲು ಯಶಸ್ವಿಯಾಗಿದ್ದು, ಸಂಘದಲ್ಲಿ ಉತ್ತಮ ಕಾರ್ಯನಿರ್ವಹಿಸಿದ್ದೇವೆ ಎಂದರು. ಆದಿ ಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ದಿವ್ಯಾಸಾನಿಧ್ಯದ ಕಾರ್ಯಕ್ರಮ ಅಧ್ಯಕ್ಷತೆಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ವಹಿಸುವರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಮತ್ತೀಕೆರೆ ಜಯರಾಮ್ ಪ್ರಾಸ್ತಾವಿಕವಾಗಿ ಮಾತನಾಡುವರು. ಮುಖ್ಯ ಅತಿಥಿಗಳಾಗಿ ಶಾಸಕ ಪಿ.ರವಿಕುಮಾರ್ ಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಜಿ.ಸಿ.ಲೋಕೇಶ್, ಕಾರ್ಯದರ್ಶಿ ಸೋಮಶೇಖರ್ ಕೆರಗೋಡು ಭಾಗವಹಿಸುವರು ಎಂದು ಹೇಳಿದರು.




ಇದೇ ವೇಳೆ ಸಂಘದ ಮಾಜಿ ಅಧ್ಯಕ್ಷರಾದ ಪಿ.ಜೆ.ಚೈತನ್ಯ ಕುಮಾರ್, ಕೆ.ಎನ್.ರವಿ, ಬಿ.ಪಿ. ಪ್ರಕಾಶ್, ಹಿರಿಯ ಪತ್ರಕರ್ತರಾದ ಎ.ಎಲ್.ಬಸವೇಗೌಡ, ಚುನಾವಣಾಧಿಕಾರಿ ಶಿವಾನಂಜಯ್ಯ (ನಂಜಪ್ಪ), ನಿರ್ಗಮಿತ ಅಧ್ಯಕ್ಷ ಕೆ.ಎನ್.ನವೀನ್ ಕುಮಾರ್, ನಿರ್ಗಮಿತ ಪ್ರಧಾನ ಕಾರ್ಯದರ್ಶಿ ಆನಂದ್ ಅವರನ್ನು ಮಿತ್ರ ಫೌಂಡೇಶನ್ ನಾ ಅಧ್ಯಕ್ಷ ಬೂಕನಕೆರೆ ವಿಜಯ್ ರಾಮೇಗೌಡ, ಮನ್ ಮುಲ್ ಅಧ್ಯಕ್ಷ ಯು.ಸಿ.ಶಿವಕುಮಾರ್ (ಉಮ್ಮಡಳ್ಳಿ ಶಿವಪ್ಪ) ಸನ್ಮಾನಿಸುವರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಹಾಲಿ ಅಧ್ಯಕ್ಷ ಕೆ.ಎನ್.ನವೀನ್ ಕುಮಾರ್, ಹಾಲಿ ಪ್ರಧಾನ ಕಾರ್ಯದರ್ಶಿ ಆನಂದ್, ಚುನಾಯಿತ ಪ್ರಧಾನ ಕಾರ್ಯದರ್ಶಿ ಶಶಿಧರ ಕಾಡುಕೊತನಹಳ್ಳಿ, ಖಜಾಂಚಿ ನಂಜುಂಡಸ್ವಾಮಿ ಉಪಸ್ಥಿತರಿರಲಿದ್ದಾರೆ.

# ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಆರ್‌ಟಿಎಂಎಸ್ ಉಪಕರಣ ಬಳಕೆ

ಮೈಸೂರು: ನಗರದ ಜೆಎಸ್‌ಎಸ್ ಆಸ್ಪತ್ರೆಯ ಮಾನಸಿಕ ವೈದ್ಯಕೀಯ ವಿಭಾಗದಲ್ಲಿ ಮಾನಸಿಕ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವ ಅತ್ಯಾಧುನಿಕ ಆರ್‌ಟಿಎಂಎಸ್ ಉಪಕರಣ ಬಳಸಿಕೊಳ್ಳಲಾಗು ತ್ತಿದ್ದು, ಆಯಸ್ಕಾಂತೀಯ ಅಲೆ ಅಥವಾ ಕಂಪನ ಗಳ ಮೂಲಕ ಈ ಸುರಕ್ಷಿತ ವಿಧಾನದ ಚಿಕಿತ್ಸೆ ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವವರು ಪಡೆದುಕೊಳ್ಳಬಹುದಾಗಿದೆ ಎಮದು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಾಚಾರ್ಯ ಡಾ.ಡಿ.ನಾರಾ ಯಣಪ್ಪ ತಿಳಿಸಿದರು.




ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಶಸ್ತ್ರ ಚಿಕಿತ್ಸೆ ಇಲ್ಲದ, ಅರಿವಳಿಕೆ ಅಗತ್ಯವಿಲ್ಲೊ, ದಿನದ ಯಾವುದಾದರೂ ವೇಳೆ ಚಿಕಿತ್ಸೆ ಪಡೆದು ಕೆಲಸಕ್ಕೆ ಹಾಜರಾಗಬಹುದಾದ ಸುರಕ್ಷಿತ ಮತ್ತು ಸರಳ ವಿಧಾನವಾಗಿದೆ. ವ್ಯಕ್ತಿಯ ರೋಗ ಲಕ್ಷಣ ಅಗತ್ಯ ಆಧರಿಸಿ 3 ರಿಂದ 30 ನಿಮಿಷದವರೆಗೆ ಚಿಕಿತ್ಸೆ ನೀಡಲಾಗುವುದು. ಈ ರೀತಿಯ ಅತ್ಯಾಧುನಿಕ ಚಿಕಿತ್ಸಾ ಉಪಕರಣ ನಗರದಲ್ಲಿ ತಮ್ಮ ಆಸ್ಪತ್ರೆಯಲ್ಲಿ ಮಾತ್ರ ಇದೆ ಎನ್ನಬಹುದಾಗಿದೆ ಎಂದರು.

ಖಿನ್ನತೆ, ಗೀಳು ರೋಗ, ಗಾಬರಿ ಕಾಯಿಲೆ, ದೀರ್ಘಕಾಲದ ನೋವು, ವ್ಯಸನ ಸಮಸ್ಯೆ, ಮೈಗ್ರೇನ್, ಸ್ಟ್ರೋಕ್ ಮೊದಲಾದ ಸಮಸ್ಯೆಯಿಂದ ಬಳಲುತ್ತಿರುವವರು ಈ ಚಿಕಿತ್ಸೆ ಪಡೆಯಬಹುದಾಗಿದೆ. ಇದು ಯಶಸ್ವಿನಿ ವ್ಯಾಪ್ತಿಗೆ ಬಂದಿದೆ. ಇತರರಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡಲಾಗುವುದು. ಆದರೆ ಮೊದಲೇ ದೂರವಾಣಿ ಮೂಲಕ ಸಮಯ ಕಾಯ್ದಿರಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ದೂ. 0821– 2335188 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಆಸ್ಪತ್ರೆ ನಿರ್ದೇಶಕರಾದ ಡಾ.ಸಿ.ಪಿ. ಮಧು, ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ.ಎಂ. ಕಿಶೋರ್ ಇದ್ದರು.

# ಹೋಲಿಕ್ರೆಸೆಂಟ್, ಪಟೇಲ್, ವಾಸವಿ ಶಾಲೆಗಳಲ್ಲಿ ಮಕ್ಕಳ ದಿನಾಚರಣೆ

ರಾಮನಗರ: ನಗರದ ವಿವಿಧ ಶಾಲೆಗಳಲ್ಲಿ ಶುಕ್ರವಾರ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು.

ಪಟೇಲ್ ಪಬ್ಲಿಕ್ ಶಾಲೆಯಲ್ಲಿ ಪಟೇಲ್ ಪಬ್ಲಿಕ್ ಆಂಗ್ಲ ಶಾಲೆಯಲ್ಲಿ ಶಾಲೆಯ ಆಡಳಿತ ಮಂಡಳಿ ಮತ್ತು ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್‌ನ ಜಿಲ್ಲಾ ಘಟಕಗಳು ಸಂಯುಕ್ತವಾಗಿ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ಸಿ ರಾಜು ಮಾತನಾಡಿ, ಕನ್ನಡ ಭಾಷೆಯನ್ನು ಉಳಿಸಿ ಉಳಿಸಿ ಎಂದು ಬೇಡುವ ಅವಶ್ಯಕತೆ ಇಲ್ಲ. ಕನ್ನಡ ಭಾಷೆ ಶ್ರೀಮಂತ ಭಾಷೆ, ಕರ್ನಾಟಕದಲ್ಲಿ ವಾಸಿಸುವ ಪ್ರತಿಯೊಬ್ಬರು ಕನ್ನಡ ಭಾಷೆಯನ್ನು ಪ್ರೀತಿಸಿ, ಮಾತನಾಡಬೇಕು. ಜೊತೆಗೆ ಸರ್ಕಾರ ಕಶಾಲಾ ಕಾಲೇಜುಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಕಡ್ಡಾಯ ಮಾಡಬೇಕು ಎಂದು ಒತ್ತಾಯಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಟಿ. ನಾಗೇಶ್ ಮಾತನಾಡಿ, ಕನ್ನಡ ಭಾಷೆ, ನೆಲ, ಜಲದ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ನಿರಂತರವಾಗಿ ಹೋರಾಟ ಮಾಡುತ್ತಿದೆ. ಪರಿಷತ್ತು ವಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ ಎಂದರು. ಕನಕಪುರ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್‌ನ ಗಬ್ಬಾಡಿ ಕಾಡೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಮ್ಮೇ ಗೌಡ ಟಿ, ಮತ್ತು ಪದಾಧಿಕಾರಿಗಳಾದ ರಾಜೇಂದ್ರ, ಬಿ ಟಿ, ಡಾ. ಮಲ್ಲೇಶ್, ಶಿವಕುಮಾರ್ ಎಂಡಿ, ರೋಟರಿ ಶಿವಣ್ಣ, ಸೋಲಾರ್ ಪುಟ್ಟಪ್ಪ, ಹಾಗೂ ಕೃಷ್ಣ ಮೊಜಾಯಿಕ್ ಮಾಲೀಕರಾದ ಶಿವಸ್ವಾಮಿ, ಸಮರ್ಥ ಟಿವಿಎಸ್ ಮಾಲೀಕರಾದ ಚಾಮರಾಜು, ಶಾಲಾ ಮುಖ್ಯ ಶಿಕ್ಷಕ ಜಿ ಆರ್ ವಿನೋದ್ ಹಾಗೂ ಶಾಲಾ ಸಿಬ್ಬಂದಿ ಹಾಜರಿದ್ದರು ಶಾಲಾ ಮಕ್ಕಳು ಕನ್ನಡ ರಾಜ್ಯೋತ್ಸವದ ಬಗ್ಗೆ ಮತ್ತು ಮಕ್ಕಳ ದಿನಾಚರಣೆಯ ಬಗ್ಗೆ ಮನರಂಜನಾ ಕಾರ್ಯಕ್ರಮ ನಡೆಸಿಕೊಟ್ಟರು.



ಹೋಲಿ ಕ್ರೆಸೆಂಟ್ ಶಾಲೆಯಲ್ಲಿ ನಗರದ ಹೋಲಿ ಕ್ರೆಸೆಂಟ್ ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯದ ವೀರ ವನಿತೆಯರು, ರಾಜರು, ನೆಹರುರವರ ವೇಷಗಳನ್ನು ಧರಿಸಿದ್ದ ಮಕ್ಕಳು ಗಮನ ಸೆಳೆದರು. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶಾಜಿಯ ಮಾತನಾಡಿ, ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡಿದರೆ ಅವರು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎಂದರು. ಶಾಲೆಯ ಕಾರ್ಯದರ್ಶಿ ಅಲ್ತಾಫ್ ಅಹಮದ್, ಶಾಲೆಯ ಪ್ರಾಂಶುಪಾಲರಾದ ಯೇಸುದಾಸ್ ಶಾಲೆಯ ಮುಖ್ಯೋಪಾಧ್ಯಾಯಿನಿ ಲತಾಆನಂದ್ ಮುಂತಾದವರು ಹಾಜರಿದ್ದರು. ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ನಗರದ ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆಯಲ್ಲಿ ತುಮಕೂರು ಜಿಲ್ಲೆ ಶಿರಾ ನಿವಾಸಿ 11 ವರ್ಷದ ಡಿ.ಆರ್.ಶ್ರೀವಿವೇಕ್ ಗುಪ್ತ ತಾನು ಕಲಿತಿದ್ದ ಗಾಂಧಾರಿ ವಿದ್ಯೆಯನ್ನು ಪ್ರದರ್ಶಿಸಿ ಬೆರಗು ಗೊಳಿಸಿದ. ಕಣ್ಣಿಗೆ ಪಟ್ಟಿ ಕಟ್ಟುಕೊಂಡು ಮಕ್ಕಳು ಮತ್ತು ನೆರೆದಿದ್ದ ಹಿರಿಯರು ತೋರಿಸಿದ ಬಣ್ಣಗಳು, ವಸ್ತುಗಳು, ನೋಟುಗಳನ್ನು ಗುರುತು ಹಿಡಿದಿದ್ದು, ಪುಸ್ತಕದಲ್ಲಿದ್ದ ಮುದ್ರಿತ ವಿಷಯಗಳು ಕಣ್ಣಿಗೆ ಕಾಣದಿದ್ದರು ಅದನ್ನು ಬೋರ್ಡಿನ ಮೇಲೆ ಬರೆದು ಚಕಿತಗೊಳಿಸಿದನು. ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಟ್ಟರು. ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯ ಅಂಗವಾಗಿ ವಾಸವಿ ವನಿತಾ ಸಂಘ ಮತ್ತು ಶಾಲೆಯವತಿಯಿಂದ ಏರ್ಪಡಿಸಿದ್ದ ವಿವಿಧ ಸ್ಪರ್ಧಾ ಚಟುವಟಿಕೆಗಳಲ್ಲಿ ಯಶಸ್ವಿಯಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ನಡೆಯಿತು. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಬಿ.ಎಂ.ನಾಗರಾಜ ಶೆಟ್ಟಿ, ಕಾರ್ಯದರ್ಶಿ ಕೆ.ಆರ್.ನಾಗೇಶ್, ನಿರ್ದೇಶಕರುಗಳಾದ ಎಂ.ಬಿ.ಜನಾರ್ಧನ, ಕಿರಣ್, ವಾಸವಿ ವನಿತಾ ಸಂಘದ ಅಧ್ಯಕ್ಷೆ ಶಾಂತಾ ನಾಗಪ್ರದೀಪ್, ಕಾರ್ಯದರ್ಶಿ ಗಾಯತ್ರಿ ಶ್ರೀನಿವಾಸ್, ಶಾಲೆಯ ಮುಖ್ಯ ಶಿಕ್ಷಕಿ ವಿ.ಕೆ.ವಿಜಯಪ್ರಭಾ ಮುಂತಾದವರು ಹಾಜರಿದ್ದರು.

# ದೊಡ್ಡಮೋಳೆಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರದ ಉದ್ಘಾಟನೆ



ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರಿಂದ ದೊಡ್ಡಮೋಳೆ ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರದ ಉದ್ಘಾಟಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ

ಚಾಮರಾಜನಗರ, ಎಂ.ಎಸ್.ಐ.ಎಲ್ ಅಧ್ಯಕ್ಷ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಚಾಮರಾಜನಗರ ತಾಲೂಕಿನ ದೊಡ್ಡಮೋಳೆ ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರ ಕಟ್ಟಡವನ್ನು ಉದ್ಘಾಟಿಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ದೊಡ್ಡಮೋಳೆ ಗ್ರಾಮ ಪಂಚಾಯಿತಿ ಕಚೇರಿ ಹಿಂಭಾಗದಲ್ಲಿ 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಆರೋಗ್ಯ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ದೊಡ್ಡಮೋಳೆ ಗ್ರಾಮವು ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ಮಾಣಕ್ಕೆ ಇರಬೇಕಾದ ಜನಸಂಖ್ಯೆಯನ್ನು ಹೊಂದಿರುವ ದೊಡ್ಡ ಗ್ರಾಮ ಪಂಚಾಯಿತಿಯಾಗಿದೆ. 2008ರಲ್ಲಿಯೇ ಇಲ್ಲಿ ಆರೋಗ್ಯ ಕೇಂದ್ರ ಕಟ್ಟಡ ಆಗಬೇಕಿತ್ತು. ಜಾಗದ ಕೊರತೆಯಿಂದ ಕಾಮಗಾರಿ ವಿಳಂಬವಾಗಿ 15 ವರ್ಷಗಳ ಬಳಿಕ ದೊಡ್ಡಮೋಳೆಯಲ್ಲಿ ನೂತನ ಆಯುಷ್ಮಾನ್ ಆರೋಗ್ಯ ಕೇಂದ್ರ ತೆರೆಯಲಾಗಿದೆ. ಈ ಭಾಗದ ಜನರು ಆರೋಗ್ಯ ಕೇಂದ್ರದ ಸದ್ಭಳಕೆ ಮಾಡಿಕೊಳ್ಳಬೇಕು ಎಂದರು. ಆರೋಗ್ಯ ಕೇಂದ್ರವು ಹರದನಹಳ್ಳಿ, ಚಿಕ್ಕಮೋಳೆ, ಬ್ಯಾಡಮೂಡ್ಲು, ಚಂದುಕಟ್ಟೆ ಮೋಳೆ, ಡೊಳ್ಳಿಪುರ, ಸೇರಿದಂತೆ ಸುತ್ತಲಿನ ಗ್ರಾಮಗಳ ಜನರು ಉಚಿತ ಆರೋಗ್ಯ ಸೇವೆ ಪಡೆಯಲು ಅನುಕೂಲವಾಗಲಿದೆ. ಸರ್ಕಾರವು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಮುಂದಿನ ದಿನಗಳಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಪ್ರಯತ್ನಿಸಲಾಗುವುದು. ಆರೋಗ್ಯ ಕೇಂದ್ರದಲ್ಲಿ ಒಬ್ಬರು ಸಮುದಾಯ ಆರೋಗ್ಯ ಅಧಿಕಾರಿ ಹಾಗೂ ಆಶಾ ಕಾರ್ಯಕರ್ತೆಯರು ಆರೋಗ್ಯ ಸೇವೆ ಒದಗಿಸಲಿದ್ದಾರೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ದೊಡ್ಡಮೋಳೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ನಿರ್ಮಲ ರಂಗನಾಥ್, ಸದಸ್ಯರಾದ ಭಾಗ್ಯಮ್ಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ತಾಲೂಕು ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ, ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಗುರುರಾಜ್ ಸಕಲಾತಿ, ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಪುಟ್ಟಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ದೊರೆಸ್ವಾಮಿ, ಗುತ್ತಿಗೆದಾರರಾದ ಸಮೀವುಲ್ಲಾ, ಇತರರು ಇದೇ ಸಂದರ್ಭದಲ್ಲಿ ಹಾಜರಿದ್ದರು.

# ಪೋಷಕರು–ಶಿಕ್ಷಕರ ಮಹಾಸಭೆ

ಹನೂರು:– ಪಟ್ಟಣದಲ್ಲಿರುವ ಪಿ ಎಂ ಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದೇಶದ ಪ್ರಥಮ ಪ್ರಧಾನಿಯಾಗಿದ್ದ ಜವಹರಲಾಲ್ ನೆಹರು ಅವರ ಹುಟ್ಟುಹಬ್ಬದ ಪ್ರಯುಕ್ತ ಮಕ್ಕಳ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

ಡಯಟ್‌ನ ಹಿರಿಯ ಉಪನ್ಯಾಸಕರು ನಾಗರಾಜು ಅವರು ಮಾತನಾಡಿ ಸರ್ಕಾರ ಪೋಷಕರ ಸಮ್ಮುಖದಲ್ಲಿ ಅವರ ಶೈಕ್ಷಣಿಕ ಪ್ರಗತಿ ಚಟುವಟಿಕೆಗಳನ್ನು ನೋಡಲು ವಿಶೇಷವಾಗಿ ಮಕ್ಕಳ ದಿನಾಚರಣೆ ಮಾಡಬೇಕೆಂದು ಆದೇಶ ನೀಡುರುವುದು ಒಳ್ಳೆಯದು ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ತುಂಬಾ ಅಚ್ಚುಕಟ್ಟಾಗಿ ನಡೆಯುತ್ತಿವೆ ಸರ್ಕಾರ ಮಕ್ಕಳಿಗೆ ತುಂಬಾ ಯೋಜನೆಗಳ್ನ್ನು ನೀಡುತ್ತಿದೆ ಬಿಸಿ ಊಟ ಮೊಟ್ಟೆ ಹಾಲು ರಾಗಿ ಮಾಲ್ಟ್ ತುಂಬಾ ಯೋಜನೆಗಳನ್ನು ಸರ್ಕಾರ ನೀಡುತ್ತಿದೆ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಿ ಹಣ ದುಂದು ವೆಚ್ಚ ಮಾಡಬೇಡಿ ಉಚಿತವಾಗಿ ಶಿಕ್ಷಣ ನೀಡುವ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ ಜೊತೆಗೆ ಪೋಷಕರು ಮಕ್ಕಳು ಓದುತ್ತಿದ್ದಾರಾ ಅವರ ದೈನಂದಿನ ಚಟುವಟಿಕೆಯನ್ನು ಗಮನಿಸಬೇಕು ಮನೆಯೇ ಮೊದಲ ಪಾಠಶಾಲೆ ಆಗಾಗಿ ನೀವೂ ಮಕ್ಕಳ ಬಗ್ಗೆ ಜಾಗೃತಿ ವಹಿಸಬೇಕು ಅವರಿಗೂ ನೀವೂ ಮಾರ್ಗದರ್ಶನ ನೀಡಬೇಕು. ಎಲ್‌ಕೆಜಿ ಯು ಕೆಜಿಕ್ಲಾಸ್ ಗಳು ಕೂಡ ಪ್ರಾರಂಭವಾಗಿದೆ ನುರಿತ ಶಿಕ್ಷಕರು ಬೋಧನೆ ಮಾಡುತ್ತಿದ್ದಾರೆ. ಇದರ ಸದುಪಯೋಗ ಪಡೆದುಕೊಳ್ಳಿ ಪೋಷಕರು ಬಾಲ್ಯ ವಿವಾಹದ ಬಗ್ಗೆ ತಿಳಿದುಕೊಳ್ಳಬೇಕು. ಶಿಕ್ಷಕರು ಮಕ್ಕಳಿಗೆ ಉತ್ತಮವಾದ ಶಿಕ್ಷಣ ಬೋಧನೆ ಮಾಡಿ ತಾವು ದಾರೆ ಎರೆಯುವ ಶಿಕ್ಷಣ ಭವ್ಯ ಭಾರತವನ್ನು ಪ್ರಜ್ವಲಿಸುವಂತ ಮಕ್ಕಳಾಗಲಿ ಎಂದು ತಿಳಿಸಿದರು. ಜೊತೆಗೆ ಮಕ್ಕಳಿಗೆ ಉತ್ತಮವಾದ ಬಿಸಿಯೂಟ ಕೊಡಿ ಯಾವುದೇ ರೀತಿಯ ಕೊರತೆಯಗದಂತೆ ನೋಡಿಕೊಳ್ಳಿ ಹಲವಾರು ಸಂಸ್ಥೆಗಳು ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸಹಕರಿಸುತ್ತಿವೆ ಶಿಕ್ಷಕರುಗಳು ಮಕ್ಕಳ ಮೇಲೆ ಹೆಚ್ಚಿನ ಗಮನವಿಡೀ. ನಮ್ಮ ಈ ಭಾಗದ ಮಕ್ಕಳು ಒಳ್ಳೆಯ ವಿದ್ಯಾರ್ಥಿಗಳಾಗಿ ಉತ್ತಮ ನಾಗರಿಕರಾಗಿ ಹೊರಹೋಮ್ಮಲಿ ಎಂದು ಹಾರೈಸಿದರು. ಮಕ್ಕಳ ದಿನಾಚರಣೆಯ ಪ್ರಯುಕ್ತ ಮಕ್ಕಳಿಗೆ ವಿವಿಧ ಆಟೋಟ ಸ್ಪರ್ಧೆ ಗಳನ್ನು ಆಯೋಜಿಸಲಾಗಿತ್ತು ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಣೆ ಮಾಡಲಾಯಿತು.ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ನಡೆಯಿತು. ಈ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ರೇಖಾ, ಸದಸ್ಯರುಗಳು,ಸಹ ಶಿಕ್ಷಕರುಗಳಾದ, ಧರ್ಮ ಲಿಂಗಮ್,ರಾಜು, ಶೈಲಾ, ಕಲಾವತಿ, ಅನಿತಾ,ಸಿ ಆರ್ ಪಿ ರಮೇಶ್,ಪೋಷಕರು ಮಕ್ಕಳು ಇದ್ದರು.




> **ಇದೆ ಶಾಲೆಯಲ್ಲಿ ಓದಿರುವ ನಾನು ಇವತ್ತು ಮುಖ್ಯ ಶಿಕ್ಷಕನಾಗಿ ಕೆಲಸ ಮಾಡುತ್ತಿರುವುದು ತುಂಬಾ ತೃಪ್ತಿ ತಂದಿದೆ ಮಕ್ಕಳು ನಿಮ್ಮ ಯಾವುದೇ ಸಮಸ್ಯೆ ಇದ್ದರೂ ನನ್ನ ದೂರವಾಣಿ ಸಂಖ್ಯೆ ತೆಗೆದುಕೊಳ್ಳಿ ಯಾವುದೇ ಸಮಯದಲ್ಲಿಯಾದರೂ ಕರೆ ಮಾಡಿ.ನಮ್ಮ ಶಾಲೆಯನ್ನು ಉತ್ತಮ ಮಟ್ಟಕ್ಕೆ ತೆಗೆದುಕೊಳ್ಳಬೇಕೆಂಬುದು ನನ್ನ ಗುರಿ ನನ್ನ ಮಕ್ಕಳು ಉತ್ತಮ ದರ್ಜೆಯಲ್ಲಿ ಓದುತ್ತಿದ್ದಾರೆ ಅದೇ ರೀತಿ ನಮ್ಮ ಶಾಲೆಯ ಎಲ್ಲಾ ಮಕ್ಕಳನ್ನು ಕೂಡ ನೋಡುವ ಆಸೆ ನನಗೆ ಶಾಲೆಯ ಸರ್ವೋತೋಮುಖ ಅಭಿವೃದ್ಧಿ ಪಡಿಸುವುದಕ್ಕಾಗಿ ಪಣ ತೊಟ್ಟಿದ್ದೇನೆ ಶಿಕ್ಷಕರು ಪೋಷಕರು ಮಕ್ಕಳು ಎಲ್ಲರೂ ಸಹಕರಿಸಿ.**
>
> ▸▸ **ಶಿವಮಲ್ಲು** ಮುಖ್ಯ ಶಿಕ್ಷಕ

# ಕೃಷಿ ಮತ್ತು ಹೈನುಗಾರಿಕೆ ರೈತರ ಮೂಲಾಧಾರ: ಶಾಸಕ ಎಂ.ಆರ್ ಮಂಜುನಾಥ್

ಹನೂರು : ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಕೃಷಿ ಮತ್ತು ಹೈನುಗಾರಿಕೆ ಬಿಟ್ಟು ಬೇರೆ ಏನು ಮಾಡಲು ಅವಕಾಶ ಕಡಿಮೆ, ಹೈನುಗಾರಿಕೆ ಸಹ ಮಾಡಲು ಆಗದೆ ಬೇರೆ ಬೇರೆ ಕಡೆ ಗುಳೆ ಹೋಗುತ್ತಿದ್ದಾರೆ ಎಂದು ಶಾಸಕ ಎಂ.ಆರ್ ಮಂಜುನಾಥ್ ತಿಳಿಸಿದರು.

ಹನೂರು ಪಟ್ಟಣದ ಚಾಮುಲ್ ಉಪ ಕಛೇರಿ ಆವರಣದಲ್ಲಿ 72 ನೇ ಅಖಿಲ ಭಾರತ ಸಹಕಾರ ಸಪ್ತಾಹ – 2025 ಸಮಾರೋಪ ಸಮಾರಂಭದ ಪ್ರಯುಕ್ತ ಹನೂರು ಕ್ಷೇತ್ರ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.. ದಿನಕ್ಕೆ 96 ಸಾವಿರ ಲೀ ಉತ್ಪಾದನೆ ಆಗುತ್ತಿರುವ ಹಾಲನ್ನು 2 ಲಕ್ಷ ಕ್ಕೆ ಹೆಚ್ಚಿಸಬೇಕು ಇದಕ್ಕೆ ಬೇಕಾದ ಸಹಕಾರವನ್ನು ನೀಡಲಾಗುವುದು. ಈ ಉಪ ಕಛೇರಿಯನ್ನು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಕರೆಯಬೇಕು, ಸರ್ಕಾರದಿಂದ ಬರುವ ಪ್ರತಿಯೊಂದು ಸೌಲಭ್ಯಗಳ ಮಾಹಿತಿಯನ್ನು ಎಲ್ಲಾ ಹಾಲು ಉತ್ಪಾದಕರ ಸಂಘಗಳು ತಿಳಿಸುವ ಕಾರ್ಯವನ್ನು ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ಈ ಕ್ಷೇತ್ರದಲ್ಲಿ ಏನು ನನಗೆ ಅವಕಾಶ ಕೊಟ್ಟಿದ್ದೀರಾ ಅದರ ಪ್ರತಿ ಫಲವಾಗಿ ನಿಮ್ಮ ಋಣ ತೀರಿಸಲು ಶ್ರಮಿಸುತ್ತೇನೆ ಎಂದರು.



ಜಿಲ್ಲೆಯಲ್ಲಿ ನಾವು ಪ್ರಥಮ ಸ್ಥಾನದಲ್ಲಿದ್ದೇವೆ,ಇನ್ನೂ ಹೆಚ್ಚಿನ ಉತ್ಪಾದನೆಗೆ ತಮ್ಮ ಸಂಘಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳ ಕಲ್ಪಿಸಲು ಕ್ರಮವಹಿಸಲಾಗುವುದು. ಸಂದರ್ಭದಲ್ಲಿ ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ ಚಾಮುಲ್ ನಿರ್ದೇಶಕರುಗಳಾದ ಮಹಾದೇವಸ್ವಾಮಿ ( ಉದ್ದನೂರು ಪ್ರಸಾದ್), ಶಾಹುಲ್ ಅಹಮದ್(ತಾರೀಖ್), ಮಾಜಿ ಅಧ್ಯಕ್ಷ ಗುರುಮಲ್ಲಪ್ಪ, ವ್ಯವಸ್ಥಾಪಕ ನಿರ್ದೇಶಕ ಕೆ ರಾಜಕುಮಾರ್, ಪ್ರಭಾರ ವ್ಯವಸ್ಥಾಪಕ ಶರತ್ ಕುಮಾರ್, ವಿಸ್ತರಣಾಧಿಕಾರಿಗಳಾದ ವೆಂಕಟೇಶ್, ರಘು, ಸೋಮಶೇಖರ್, ಶ್ರೀನಿವಾಸ್ ಪ್ರಸಾದ್, ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ರಾಯಪ್ಪ, ವಿವಿಧ ಗ್ರಾಮಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಹಕರು ಹಾಜರಿದ್ದರು..

## ಬಿಹಾರ ಫಲಿತಾಂಶ: ಮೈಸೂರಲ್ಲಿ ಬಿಜೆಪಿ ಸಂಭ್ರಮ

ಮೈಸೂರು: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್ ಡಿಎ ಮೈತ್ರಿ ಕೂಟ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ನಗರದ ಬಿಜೆಪಿ ಕಚೇರಿ ಎದುರು ಜಮಾವಣೆಗೊಂಡ ನಗರ ಹಾಗೂ ಬಿಜೆಪಿ ಮುಖಂಡರು, ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವಕ್ಕೆ ಗೆಲುವು ಸಿಕ್ಕಿದೆ ಎಂಬಿತ್ಯಾದಿ ಘೋಷಣೆ ಕೂಗಿ ಸಂಭ್ರಮಿಸಿದರು. ಶಾಸಕ ಶ್ರೀವತ್ಸ ಮಾತನಾಡಿ, ಜನತೆ ಇಂದಿಗೂ ಪ್ರಧಾನಿ ನರೇಂದ್ರಮೋದಿಯವರ ಆಡಳಿತವನ್ನು ಮೆಚ್ಚಿದ್ದಾರೆ ಎಂಬುದಕ್ಕೆ ಈ ಫಲಿತಾಂಶವೇ ಸಾಕ್ಷಿಯಾಗಿದೆ. ಆ ಮೂಲಕ ಮಹಾಘಟ್ ಬಂಧನವನ್ನು ಜನ ವಿರೋಧಿಸಿರುವುದು ಸ್ಪಷ್ಟವಾಗಿದೆ. ಮಾತ್ರವಲ್ಲದೆ ಮುಂದಿನ ದಿನಗಳಲ್ಲಿಯೂ ರಾಜ್ಯದ ಫಲಿತಾಂಶ ಬಿಜೆಪಿ ಪರವಾಗಿ ಬರಲಿದೆ ಎಂಬುದಕ್ಕೆ ದಿಕ್ಸೂಚಿಯಾಗಿ ಈ ಫಲಿತಾಂಶವಿದೆ ಎಂದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಕಾಂಗ್ರೆಸ್ ಹಾಗೂ ಅವರ ಮೈತ್ರಿ ಪಕ್ಷಗಳನ್ನು ಜನರು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ಬಿಹಾರ ಜನತೆ ಕಮಲ ಗೆಲ್ಲಿಸಿರುವುದಕ್ಕೆ ಎಲ್ಲರೂ ಅಭಿನಂದನೆ ಸಲ್ಲಿಸುತ್ತೇವೆ. ರಾಜ್ಯ ರಾಜಕಾರಣಕ್ಕೂ ಇದು ದಿಕ್ಸೂಚಿ ಫಲಿತಾಂಶ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಎಂ.ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಯುವ ಮುಖಂಡರಾದ ರಾಕೇಶ್, ಕಿರಣ್ ಗೌಡ, ಮಾದ್ಯಮ ವಕ್ತಾರ ಮಹೇಶ್ ರಾಜೇ ಅರಸ್, ಮುಖಂಡರಾದ ಗಿರೀಶ್, ಜೀವಾಧಾರ ಗಿರಿಧರ್, ಪ್ರದೀಪ್ ಕುಮಾರ್, ಲೋಹಿತ್ ಇನ್ನಿತರರು ಉಪಸ್ಥಿತರಿದ್ದರು.




## ನಾಳೆ ಕನಕದಾಸ ಪತ್ತಿನ ಚುನಾವಣೆ

ಮೈಸೂರು: ನಗರದ ಜಗನ್ಮೋಹನ ಅರಮನೆ ಬಳಿಯ ಕನಕದಾಸ ಪತ್ತಿನ ಸಹಕಾರ ಸಂಘದ ಚುನಾವಣೆ ನ.16 ರಂದು ನಗರದ ಹಾರ್ಡ್ವಿಕ್ ವಿದ್ಯಾ ಸಂಸ್ಥೆಯಲ್ಲಿ ನಡೆಯಲಿದ್ದು, ಸಂಘದ ಏಳಿಗೆಗಾಗಿ ಮತದಾರರು ತಮ್ಮ ಬಣದ ಅಭ್ಯರ್ಥಿಗಳಿಗೆ ಮತ ಹಾಕಬೇಕೆಂದು ಸಂಸ್ಥಾಪಕ ನಿರ್ದೇಶಕ ಎಂ. ಮಧು ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತಮ್ಮ ಬಣದಿಂದ ನಿರ್ದೇಶಕರ ಸ್ಥಾನಕ್ಕೆ ಚೇತನ್ ಪುಟ್ಟಣ್ಣ, ಎಂ. ದೀಪಾ, ಆರ್. ನವೀನ್, ಮನಸು (ಮನು), ಟಿ.ಎ. ರಕ್ಷಿತಾ, ಕೆ. ರಾಜಶೇಖರ್, ಜೆ. ರಾಜೇಶ್, ಎಂ.ಎನ್. ಶಶಿರಾಜ್, ಪಿ. ಶಾರದಾ ಸ್ಪರ್ಧಿಸಿದ್ದಾರೆ. ಈ ಹಿಂದಿನ ಅಧ್ಯಕ್ಷರಾಗಿದ್ದ ಜೆ. ಮಹೇಶ್ ಅವರ ಅವಧಿಯಲ್ಲಿ ಆದಾಯ ತೆರಿಗೆ ಇಲಾಖೆಗೆ ಪ್ರತಿವರ್ಷ ರಿಟರ್ನ್ಸ್ ಫೈಲ್ ಮಾಡದ ಕಾರಣ ಆದಾಯ ತೆರಿಗೆ ಇಲಾಖೆ ದಂಡ ಸಮೇತ ತೆರಿಗೆ ಕಟ್ಟಲು ನೋಟಿಸ್ ನೀಡಿತ್ತು. ಬ್ಯಾಂಕ್ ಖಾತೆಯನ್ನೂ ಸೀಝ್ ಮಾಡಿತ್ತು. ಇದರಿಂದಾಗಿ ಠೇವಣಿ ಇಟ್ಟವರು ಸಾಕಷ್ಟು ಸಮಸ್ಯೆಗೊಳಗಾದರು. ಇದೇ ರೀತಿಯ ಹಲವಾರು ಅವ್ಯವಹಾರ ನಡೆದಿವೆ. ಹೀಗಾಗಿ ಸಂಘವನ್ನು ಪುನಃ ಏಳಿಗೆ ಹಾದಿಗೆ ಕೊಂಡೊಯ್ಯಲು ತಮ್ಮ ಬಣವನ್ನು ಚುನಾಯಿಸಬೇಕೆಂದು ಕೋರಿದರು.

ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಪ್ರೊ.ಕೆ. ಮೂರ್ತಿ, ಶಿವಕುಮಾರ್ ಮೊದಲಾದವರು ಇದ್ದರು.



# ಹಸಿರಲ್ಲಿ ಒಂದಾದ ಸಾಲುಮರದ ತಿಮ್ಮಕ್ಕ

▸▸ **ವೀಣಾ ಹೇಮಂತ್ ಗೌಡ ಪಾಟೀಲ್**

ಆ ದಂಪತಿಗಳಿಗೆ ಮಕ್ಕಳಿರಲಿಲ್ಲ... ಬಹಳಷ್ಟು ವರ್ಷಗಳ ಕಾಲ ಮಕ್ಕಳಿಗಾಗಿ ಹಾತೊರೆದ ಆ ದಂಪತಿಗಳು ತಮ್ಮ ನೋವನ್ನು ಮರೆಯಲು ಸಾಧ್ಯವಾಗಿರಲಿಲ್ಲ. ಅದೊಂದು ದಿನ ಕಾರ್ಯನಿಮಿತ್ತ ತಮ್ಮ ಊರಿನಿಂದ ಮತ್ತೊಂದು ಊರಿಗೆ ತೆರಳಿದಾಗ ದಾರಿಯಲ್ಲಿ ದಣಿವನ್ನು ಆರಿಸಿಕೊಳ್ಳಲು ಕುಳಿತುಕೊಳ್ಳಬೇಕೆಂದರೆ ಒಂದೇ ಒಂದು ಮರ ಇಲ್ಲದೆ ಇರುವುದು ಗಮನಕ್ಕೆ ಬಂತು. ಕೂಡಲೇ ಕಾರ್ಯ ಪ್ರವೃತ್ತರಾದ ದಂಪತಿಗಳು ಸುಮಾರು ನಾಲ್ಕೈದು( 2.8 ಮೈಲಿ ) ಕಿಲೋಮೀಟರ್ ದೂರದವರೆಗಿನ ರಸ್ತೆಯಲ್ಲಿ ತಾವೇ ಗುಂಡಿಗಳನ್ನು ತೋಡಿ ಸಸಿಗಳನ್ನು ನೆಟ್ಟು ಪ್ರತಿದಿನ ಅವುಗಳಿಗೆ ನೀರುಣಿಸತೊಡಗಿದರು.


ಮೊದಮೊದಲು ಈ ದಂಪತಿಗಳ ಕೃತ್ಯವನ್ನು ನೋಡಿ ಜನ ತಮಾಷೆ ಮಾಡಿ ನಗುತ್ತಿದ್ದರು. ಬೇರೆ ಕೆಲಸ ಇಲ್ಲ ಇವರಿಗೆ ಎಂದು ಹೀಯಾಳಿಸುತ್ತಿದ್ದರು ಮುಂದಿನ ಕೆಲವೇ ವರ್ಷಗಳಲ್ಲಿ ಆ ಮರಗಳು ಬೆಳೆದು ನಿಂತು ಆ ಹಾದಿಯಲ್ಲಿ ಹೋಗುವ ಜನರಿಗೆ ನೆರಳನ್ನು ನೀಡತೊಡಗಿದವು.

ಸಾವಿರಾರು ಪಕ್ಷಿಗಳಿಗೆ ಆಶ್ರಯ ತಾಣವಾಗಿ ಆ ದಾರಿಯಲ್ಲಿ ಹಾದು ಹೋಗುವ ಜನರಿಗೆ, ಜಾನುವಾರುಗಳಿಗೆ ನೆರಳನ್ನು ನೀಡುವ ಮರಗಳ ಅಡಿಯಲ್ಲಿ ವಿಶ್ರಾಂತಿ ಪಡೆದು ನೆಮ್ಮದಿಯಿಂದ ಮುಂದೆ ಸಾಗಿದಾಗ ಆ ದಂಪತಿಗಳ ಶ್ರಮ ಸಾರ್ಥಕವಾಯಿತು ಎಂಬ ಭಾವ ಅವರಲ್ಲಿ. 385 ಮರಗಳನ್ನು ನೆಟ್ಟ ದಂಪತಿಗಳು ಅವುಗಳನ್ನು ತಮ್ಮ ಮಕ್ಕಳಂತೆ ಪೋಷಿಸಿದರು. ಒಟ್ಟು 80,00ಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ಕುವೆಂಪು ಅವರ ಪಕ್ಷಿಕಾಶಿ ಕವನ ಸಂಕಲನದ ನುಡಿಯಂತೆ

**ಹಸುರತ್ತಲ್ ! ಹಸುರಿತ್ತಲ್ !**
**ಹಸುರೆತ್ತಲ್ ಕಡಲಿನಲಿ**
**ಹಸುರ್ಗಟ್ಟಿತೊ ಕವಿಯಾತ್ಮಂ**
**ಹಸುರ್ನೆತ್ತರ್ ಒಡಲಿನಲಿ !***

ಈ ದಂಪತಿಗಳು ರಸ್ತೆಯ ಬದಿಗಳನ್ನು ಹಸಿರಾಗಿಸಿದರು. ಗಿಡಗಳನ್ನು ನೆಟ್ಟು ಪೋಷಿಸಿ ಪರಿಸರವಾದಿಗಳಾದರು. ಅವರೇ ನಮ್ಮ ಸಾಲುಮರದ ತಿಮ್ಮಕ್ಕ ಮತ್ತು ಚಿಕ್ಕಯ್ಯ ದಂಪತಿಗಳು.

ತಮ್ಮ ಪರಿಸರದ ಕಾಳಜಿಯಿಂದಾಗಿ ಅವರು ರಾಷ್ಟ್ರದ "ಭಾರತೀಯ ಪೌರ ಪ್ರಶಸ್ತಿ" ಹಾಗೂ ಪ್ರತಿಷ್ಠಿತ ಪದ್ಮ ಶ್ರೀ ಪ್ರಶಸ್ತಿಯನ್ನು 2019ರಲ್ಲಿ ಪಡೆದರು. ಕೇವಲ ಭಾರತದಲ್ಲಿ ಮಾತ್ರವಲ್ಲ ಅಮೆರಿಕಾ ಸಂಯುಕ್ತ ಸಂಸ್ಥಾನದ ಓಕ ಲ್ಯಾಂಡ್ ಮತ್ತು ಕ್ಯಾಲಿಫೋರ್ನಿಯಾಗಳಲ್ಲಿ ಸಾಲುಮರದ ತಿಮ್ಮಕ್ಕನವರ ಹೆಸರಿನಲ್ಲಿ "ತಿಮ್ಮಕ್ಕನ ಪರಿಸರ ಶಿಕ್ಷಣ ಸಂಪನ್ಮೂಲಗಳು" ಎಂಬ ಹೆಸರಿನ ಪರಿಸರ ಸಂಘಟನೆಗಳನ್ನು ಹುಟ್ಟು ಹಾಕಲಾಗಿದೆ. ಅಂದಿನ ಮೈಸೂರು ರಾಜ್ಯದ ತುಮಕೂರು ಜಿಲ್ಲೆಯ ಗುಬ್ಬಿ ಎಂಬ ಊರಿನಲ್ಲಿ ಹುಟ್ಟಿದ ತಿಮ್ಮಕ್ಕನವರು ಅನಕ್ಷರಸ್ಥ ಹೆಣ್ಣು ಮಗಳು. ರಾಮನಗರ ಜಿಲ್ಲೆಯ ಹುಲಿಕಲ್ ತಾಲೂಕಿನ ಮಾಗಡಿ ಗ್ರಾಮದ ಚಿಕ್ಕಯ್ಯನವರನ್ನು ವಿವಾಹವಾಗಿ ಪತಿಯ ಮನೆಗೆ ತಿಮ್ಮಕ್ಕ ಬಂದರು. ಹತ್ತಿರದ ಕಲ್ಲು ಗಣಿಗಾರಿಕೆಯ ಸ್ಥಳದಲ್ಲಿ ಕೂಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿದ್ದ ದಂಪತಿಗಳಿಗೆ ವರ್ಷಗಳು ಕಳೆದರೂ ಮಕ್ಕಳಾಗಲಿಲ್ಲ. ಮಕ್ಕಳಾಗಲಿಲ್ಲ ಎಂಬ ಚಿಂತೆಯಲ್ಲಿ ದಂಪತಿಗಳು ನೊಂದರು. ಅದೊಂದು ದಿನ ಕೆಲಸದ ನಿಮಿತ್ತ ಹೊರಟಾಗ ಮೇಲಿನ ಘಟನೆ ನಡೆಯಿತು. ಅದೊಂದು ಯಜ್ಞವೆಂಬಂತೆ ದಂಪತಿಗಳು



## ಒಂದು ನುಡಿ ನಮನ

ತಮ್ಮ ಊರಿನ ಬಳಿ ದೊರೆಯುತ್ತಿದ್ದ ಫಿಕಸ್ ಎಂಬ ಆಲದ ಮರಗಳನ್ನು ಕಸಿ ಮಾಡಲು ಆರಂಭಿಸಿದರು. ಹೀಗೆ ಕಸಿ ಮಾಡಿದ ಗಿಡಗಳನ್ನು ರಾಷ್ಟ್ರೀಯ ಹೆದ್ದಾರಿ 94ರ ಬದಿಯಲ್ಲಿ ವ್ಯವಸ್ಥಿತವಾಗಿ ನೆಟ್ಟರು. ಮೊದಲ ವರ್ಷ ಐದು, ಎರಡನೇ ವರ್ಷ ಹತ್ತು, ಮೂರನೇ ವರ್ಷ ಹದಿನೈದು ಹೀಗೆ ಪ್ರತಿ ವರ್ಷವೂ ಸಸಿಗಳನ್ನು ಕಸಿ ಮಾಡಿ ನೆಡುವ ಮೂಲಕ ರಸ್ತೆಯುದ್ದಕ್ಕೂ ಹಸಿರಿನ ಸಿರಿಯನ್ನು ಹಾಸಿದರು. ಸುಮಾರು ನಾಲ್ಕೂವರೆ ಕಿಲೋಮೀಟರ ಉದ್ದದವರೆಗೆ ಈ ಮರ ಗಳನ್ನು ನೆಡುವುದರ ಜೊತೆಗೆ ಅವುಗಳಿಗೆ ನೀರನ್ನು ಹೊತ್ತು ತಂದು ಹಾಕಿ ಪೋಷಿಸಿದ ದಂಪತಿಗಳು ಅವುಗಳಲ್ಲೇ ತಮ್ಮ ಮಕ್ಕಳನ್ನು ಕಂಡುಕೊಂಡರು. 'ಹಸಿರೇ ಉಸಿರು' ಎಂದು ಹೇಳದೆಯೂ ಹಸಿರಿನ ನೇತಾ ರರಾದರು.... ಬಣ್ಣದ ಮಾತಿನ ಮಂಟಪ ಕಟ್ಟದೆ ಗೋಚರಿಸುವ ದೂರದವರೆಗೂ ಹಸಿರನ್ನೇ ಬಿತ್ತಿ ಬೆಳೆದರು. ಇದೀಗ ಸುಮಾರು ಒಂದುವರೆ ಮಿಲಿಯನ್ ಕಿಮ್ಮತ್ತಿನ ಈ ಹಸಿರಿನ ಆಲದ ಮರಗಳು ತಿಮ್ಮಕ್ಕನಿಗೆ ಸಾಲುಮರದ ತಿಮ್ಮಕ್ಕ, ಆಲದ ಮರದ ತಿಮ್ಮಕ್ಕ ಎಂದು ನಾಮಕರಣ ವಾಗಲು ಕಾರಣವಾದವು.




- **1991ರಲ್ಲಿ ಪತಿ ಚಿಕ್ಕಯ್ಯನವರು ತೀರಿದ ನಂತ ರವೂ ಕೂಡ ತನ್ನ ಈ ಕಾಯಕವನ್ನು ಮುಂದುವರೆಸಿದ ತಿಮ್ಮಕ್ಕನನ್ನು ಹಲವಾರು ಪ್ರಶಸ್ತಿ, ಪುರಸ್ಕಾರಗಳು ಅರಸಿ ಬಂದವು. ಜನರಿಂದ ನಿರ್ಮಿಸಲ್ಪಟ್ಟ ಕರ್ನಾಟಕದ ಬಹುತೇಕ ಎಲ್ಲ ಉದ್ಯಾನಗಳಿಗೆ ಸಾಲುಮರದ ತಿಮ್ಮಕ್ಕನ ಹೆಸರೇ ಕಾಯಂ ಆಯಿತು. ಪರಿಸರ ಸಂಬಂಧಿ ಎಲ್ಲ ಕಾರ್ಯಕ್ರಮಗಳಿಗೆ ತಿಮ್ಮಕ್ಕನಿಗೆ ಆಹ್ವಾನ, ಗೌರವ ಸನ್ಮಾನಗಳು ದೊರೆತವು.**
- **ಸಾಲುಮರದ ತಿಮ್ಮಕ್ಕ ನೆಟ್ಟು ಪೋಷಿಸಿ ಬೆಳೆಸಿದ ಮರಗಳಿಗೆ ಕೊಡಲಿ ಪೆಟ್ಟು ಬೀಳುವ ಸಂದರ್ಭ ಕೂಡ ಎದುರಾಯಿತು. ಬಾಗೇಪಲ್ಲಿ–ಹಲಗೂರು ರಾಷ್ಟ್ರೀಯ ಹೆದ್ದಾರಿಯ ಅಗಲೀಕರಣ ಕಾಮಗಾರಿಗೆ ಮರಗಳು ಬಲಿಯಾಗುವ ಸಾಧ್ಯತೆಗಳನ್ನು ಅರಿತ ತಿಮ್ಮಕ್ಕ ಅಂದಿನ ಮುಖ್ಯಮಂತ್ರಿಗಳಾಗಿದ್ದ ಹೆಚ್ ಡಿ ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿಗಳಾಗಿದ್ದ**
- **ಜಿ ಪರಮೇಶ್ವರ್ ಅವರನ್ನು ಭೇಟಿಯಾಗಿ ಯೋಜನೆಯನ್ನು ಮರುಪರಿಶೀಲಿಸಲು ಕೋರಿಕೊಂಡರು. ಪರಿಣಾಮವಾಗಿ 2019 ರಲ್ಲಿ 70 ವರ್ಷ ಮೇಲ್ಪಟ್ಟ ಆಲದ ಮರಗಳನ್ನು ಸುರಕ್ಷಿತವಾಗಿ ಬೇರೆಡೆ ಸ್ಥಳಾಂತರಿಸಲಾಯಿತು.**
- **1995ರಲ್ಲಿ ತಿಮ್ಮಕ್ಕ ಅವರಿಗೆ ರಾಷ್ಟ್ರೀಯ ಪೌರ ಪ್ರಶಸ್ತಿ ದೊರೆಯಿತು.**
- **1997ರಲ್ಲಿ 'ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ' ಗೌರವ ಪುರಸ್ಕಾರ ನೀಡಲಾಯಿತು. ಅದೇ ವರ್ಷ**
- **'ವೀರ ಚಕ್ರ' ಗೌರವ ಪ್ರಶಸ್ತಿಯು ಅವರಿಗೆ ಸಂದಿತು.**
- **2000 ಇಸವಿಯಲ್ಲಿ 'ಕರ್ನಾಟಕ ಕಲ್ಪವಲ್ಲಿ' ಪ್ರಶಸ್ತಿ, 'ಗಾಡ ಫ್ರೆ ಫಿಲಿಪ್ಸ್' ಗೌರವ,**
- **ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ 'ವಿಶಾಲಾಕ್ಷಿ' ಪ್ರಶಸ್ತಿ**
- **2010ರಲ್ಲಿ ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿಗೆ ತಿಮ್ಮಕ್ಕ ಪಾತ್ರರಾಗಿದ್ದಾರೆ.**
- **2019ರ ಮಾರ್ಚ್ 16ರಂದು ರಾಷ್ಟ್ರಪತಿ ಭವನದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ ಶತಾಯುಷಿ ಸಾಲುಮರದ ತಿಮ್ಮಕ್ಕ ಅಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ತಲೆಯ ಮೇಲೆ ಕೈ ಇಟ್ಟು ಹಾರೈಸಿದರು.**
- **ಜಗತ್ತಿನ ನೂರು ಜನ ಪ್ರಭಾವಿ ಮಹಿಳೆಯರಲ್ಲಿ ಒಬ್ಬರಾಗಿ ಸಾಲುಮರದ ತಿಮ್ಮಕ್ಕನವರನ್ನು 2016ರಲ್ಲಿ ಬಿ ಬಿ ಸಿ ( ಬ್ರಿಟಿಷ್ ಬ್ರಾಡ್ ಕಾಸ್ಟಿಂಗ್ )ಗುರುತಿಸಿ ಗೌರವಿಸಿದೆ.**

ಹೀಗೆ ನೂರಾರು ಪ್ರಶಸ್ತಿ ಗೌರವಗಳಿಗೆ ಪಾತ್ರ ರಾದ ಸಾಲುಮರದ ತಿಮ್ಮಕ್ಕನವರು ಹಲ ವಾರು ಪರಿಸರ ಸಂಬಂಧಿ ಕಾರ್ಯಕ್ರಮ ಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿ ದ್ದರು. ತಮ್ಮ ಊರಿನಲ್ಲಿ ಸರಕಾರ ಹಾಗೂ ಸಂಘ ಸಂಸ್ಥೆಗಳ ಸಹಾಯ ಹಸ್ತದ ಜೊತೆಗೆ ತಮಗೆ ಬಂದ ಪ್ರಶಸ್ತಿಯ ಹಣದಲ್ಲಿಮಳೆ ನೀರನ್ನು ಸಂಗ್ರಹಿಸಲು ಬೃಹತ್ತಾದ ಟ್ಯಾಂಕ್ ಒಂದನ್ನು ಕಟ್ಟಿಸಿದರು. ತನ್ನ ಪತಿಯ ಹೆಸರಿನಲ್ಲಿ ಆಸ್ಪತ್ರೆಯೊಂದನ್ನು ಕಟ್ಟುವ ಆಶಯವನ್ನು ಹೊತ್ತು ತಿಮ್ಮಕ್ಕ ಅದಕ್ಕಾಗಿ ಟ್ರಸ್ಟ್ ಒಂದನ್ನು ರಚಿಸಿದ್ದರು. ವಯೋ ಸಹಜವಾಗಿ ನಿಶಕ್ತಗೊಂಡಿರುವ ತಿಮ್ಮಕ್ಕ ಒಂದೊಮ್ಮೆ ಬಿದ್ದು ಪೃಷ್ಟದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಯಾವುದೇ ರೀತಿಯ ಆಸೆ, ಆಮಿಷಗಳಿಗೆ ಒಳಗಾಗದ ತಿಮ್ಮಕ್ಕನವರನ್ನು ಅವರ ದತ್ತು ಪುತ್ರ [illegible] ಅವರು ಇಲ್ಲಿಯವರೆಗೂ ನೋಡಿಕೊಂಡಿದ್ದಾರೆ. 'ಪರಿಸರ ಮಾತೆ' ಎಂದು ಹೆಸರಾಗಿರುವ ತಿಮ್ಮಕ್ಕನವರಿಗೆ ಈ ಟಿ ವಿಯ ರಂಗನಾಥ್ ಅವರ



ಸಹಕಾರದಿಂದ ಅಂದಿನ ಮುಖ್ಯಮಂತ್ರಿಯಾಗಿದ್ದ ಎಸ್ ಆರ್ ಬೊಮ್ಮಾಯಿ ಅವರು ಸ್ವಂತ ಮನೆಯನ್ನು ಸರ್ಕಾರದಿಂದ ಕೊಡ ಮಾಡಿದ್ದಾರೆ. ತಿಮ್ಮಕ್ಕನವರ ಹೆಸರನ್ನು ಬಳಸಿಕೊಂಡು ಸಂಘಟನೆಯೊಂದು ಹಣ ವಸೂಲಿ ಮಾಡುತ್ತಿದ್ದಾಗ ಇದರ ವಿರುದ್ಧ ತಿರುಗಿಬಿದ್ದ ತಿಮ್ಮಕ್ಕನವರು ನ್ಯಾಯಾಲಯದ ಬಾಗಿಲು ತಟ್ಟಿದರು. ತಮ್ಮ ಹೆಸರನ್ನು ದುರುಪಯೋಗಪಡಿಸಿಕೊಳ್ಳುವುದರ ವಿರುದ್ಧ ನ್ಯಾಯ ಕೇಳಿದ ತಿಮ್ಮಕ್ಕ ಅಲ್ಲೂ ಕೂಡ ಜಯಶಾಲಿಯಾಗಿದ್ದರು.

ಹಲವಾರು ಬಾರಿ ವಯೋ ಸಹಜ ತೊಂದರೆಗಳಿಂದ ಆಸ್ಪತ್ರೆ ಸೇರಿದ ತಿಮ್ಮಕ್ಕನವರ ಚಿಕಿತ್ಸೆಗೆ ಸರ್ಕಾರ ಸಹಾಯ ಹಸ್ತವನ್ನು ನೀಡಿದೆ. ಹಲವಾರು ಬಾರಿ ಯಮ ಸದನದ ಬಾಗಿಲು ತಟ್ಟಿದ ತಿಮ್ಮಕ್ಕನವರು ಕೆಲ ದಿನಗಳ ಹಿಂದೆ ಬಿದ್ದು ಆಸ್ಪತ್ರೆ ಸೇರಿದ್ದರು. ಮಕ್ಕಳ ದಿನಾಚರಣೆಯ ಈ ದಿನ ತಿಮ್ಮಕ್ಕ ಎಂಬ ಪರಿಸರ ಜ್ಯೋತಿ ತನ್ನ ವಯೋ ಸಹಜ ತೊಂದರೆಗಳಿಂದ ಹೊರಬರಲು ಸಾಧ್ಯವಾಗದೆ ಇದೀಗ ಕೊನೆಯುಸಿರೆಳೆದಿದ್ದಾರೆ. ಮನುಷ್ಯ ಹುಟ್ಟಿದಾಗ ಆತನಿಗೆ ಕೇವಲ ಉಸಿರಿರುತ್ತದೆ ಹೆಸರಿರುವುದಿಲ್ಲ. ಆದರೆ ಆತ ಸತ್ತಾಗ ಉಸಿರು ಇರುವುದಿಲ್ಲ ನಿಜ... ಆದರೆ ಹೆಸರು ಇರುತ್ತದೆ. ತಿಮ್ಮಕ್ಕನವರು ನಮ್ಮನ್ನು ಅಗಲಿರುವ ಈ ಕ್ಷಣದಲ್ಲಿ ಮನಸ್ಸಿಗೆ ತೋಚಿದ್ದು ಅವರ ಭೌತಿಕ ದೇಹ ನಮ್ಮೊಡನೆ ಇರದೆ ಹೋದರೂ ಅವರ ಆತ್ಮಿಕ ದೇಹದ ಉಸಿರು ನಮ್ಮ ಸುತ್ತಲೂ ನಾವು ಬೆಳೆಸುವ ಹಸಿರಿನಲ್ಲಿರುತ್ತದೆ. ಆ ಹಸಿರನ್ನು ಸದಾ ಕಾಯ್ದುಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದು ಹಾಗೂ ಆ ಜವಾಬ್ದಾರಿಯನ್ನು ಬದ್ಧತೆಯಿಂದ ನಾವೆಲ್ಲರೂ ನಿರ್ವಹಿಸೋಣ ಎಂಬ ಆಶಯದೊಂದಿಗೆ ಸಾಲುಮರದ ತಿಮ್ಮಕ್ಕನವರನ್ನು ಗೌರವ ಪೂರ್ವಕವಾಗಿ ಬೀಳ್ಕೊಡುವ.

# ಗ್ಯಾರಂಟಿ ಜೀವನದ ಭದ್ರತೆಯನ್ನು ಒದಗಿಸಿವೆ–ಎ.ಬಿ.ಕುಮಾರ್

ಕೆ.ಆರ್.ಪೇಟೆ: ನಮ್ಮ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರಿಗೆ ಮತ್ತು ಬಡವರಿಗೆ ಆರ್ಥಿಕ ನೆರವು ನೀಡಿ, ಅವರ ಜೀವನಮಟ್ಟವನ್ನು ಸುಧಾರಿಸಿವೆ. ಸಾಮಾಜಿಕ ನ್ಯಾಯವನ್ನು ಉತ್ತೇಜಿವೆ. ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಉದ್ಯೋಗ ಮತ್ತು ಸ್ವಾವಲಂಬನೆಯ ಅವಕಾಶಗಳನ್ನು ಒದಗಿಸಿವೆ. ಈ ಯೋಜನೆಗಳು ವಿಶೇಷವಾಗಿ ಮಹಿಳೆಯರು ಮತ್ತು ನಿರುದ್ಯೋಗಿಗಳಿಗೆ ಆರ್ಥಿಕ ಭದ್ರತೆ ಮತ್ತು ಜೀವನದ ಭದ್ರತೆಯನ್ನು ಒದಗಿಸಿವೆ ಎಂದು ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಘಟಕದ ಅಧ್ಯಕ್ಷರಾದ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್ ಹೇಳಿದರು.



ಅವರು ಪಟ್ಟಣದ ತಾಲ್ಲೂಕು ಪಂಚಾಯಿತಿಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನವು ರಾಜ್ಯದ ಅಭಿವೃದ್ಧಿ ಕಾರ್ಯಗಳಲ್ಲೂ ಗ್ಯಾರಂಟಿ ನೀಡುತ್ತದೆ ಮತ್ತು ಸಮಾಜದ ಪ್ರತಿಯೊಂದು ವರ್ಗದ ಸುಧಾರಣೆಗೆ ಕೊಡುಗೆ ನೀಡಿದೆ. ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಸಮಸ್ಯೆಗಳಿಂದ ತತ್ತರಿಸಿರುವ ಜನರಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರ ಬದುಕನ್ನು ಸುಧಾರಿಸಿವೆ. ಜನಸಾಮಾನ್ಯರಿಗೆ ಬದುಕಲು ಬೇಕಾದ ಮೂಲ ಸೌಲಭ್ಯಗಳು ನಮ್ಮ ಗ್ಯಾರಂಟಿ ಯೋಜನೆಯಿಂದ ಸಿಗುತ್ತಿವೆ. ಯಾರೂ ಸಹ ಬದುಕಿಗಾಗಿ ಸಾಲ ಮಾಡುವ ಪ್ರಮೇಯವೇ ಬರುವುದಿಲ್ಲ. ಗೃಹಲಕ್ಷ್ಮೀ ಯೋಜನೆಯಂತಹವು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಮತ್ತು ಶಿಕ್ಷಣದಂತಹ ಉತ್ತಮ ಕಾರ್ಯಗಳಿಗೆ ನೆರವಾಗಿದೆ ಎಂದು ತಿಳಿಸಿದರು. ಜನವರಿ ತಿಂಗಳಿನಿಂದ ಇಂದಿರಾ ಕಿಟ್ ಅನ್ನು ಆಹಾರ ಇಲಾಖೆಯ ಮೂಲಕ ಸೊಸೈಟಿಗಳು ಹಾಗೂ ನ್ಯಾಯ ಬೆಲೆ ಅಂಗಡಿಗಳಿಂದ ವಿತರಣೆ ಮಾಡಲಾಗುತ್ತಿದೆ. ಈ ಇಂದಿರಾ ಕಿಟ್ ನಲ್ಲಿ ಬೇಳೆ, ಅಡುಗೆ ಎಣ್ಣೆ, ಸೋಪು, ಅಕ್ಕಿ ಮತ್ತಿತರ ಮನೆ ಬಳಕೆಯ ಅಗತ್ಯ ವಸ್ತುಗಳು ಇರುತ್ತವೆ ಹಾಗಾಗಿ ಅರ್ಹ ಬಿಪಿಎಲ್ ಕಾರ್ಡುದಾರರ ಫಲಾನುಭವಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಎ.ಬಿ.ಕುಮಾರ್ ಸಲಹೆ ನೀಡಿದರು.

ತಾಲ್ಲೂಕು ಆಹಾರ ಇಲಾಖೆಯ ಶಿರಸ್ತೇದಾರ್ ನಟರಾಜ್, ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪುಟ್ಟಸ್ವಾಮೀಗೌಡ, ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎಸಿಡಿಪಿಓ ಪದ್ಮಮ್ಮ, ಜಿಲ್ಲಾ ಉದ್ಯೋಗಾಧಿಕಾರಿ ವಿ.ನವೀನ್‌ಕುಮಾರ್, ಡಿಪೋ ಟ್ರಾಫಿಕ್ ಇನ್ಸ್‌ಪೆಕ್ಟರ್ ಗವಿಸಿದ್ದಪ್ಪ ಅವರು ತಮ್ಮ ತಮ್ಮ ಇಲಾಖೆಯ ಪ್ರಗತಿಯ ವರದಿಯನ್ನು ಮಂಡಿಸಿದರು. ಸಭೆಯಲ್ಲಿ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ಯಾರಂಟಿ ಸಮಿತಿಯ ಸದಸ್ಯ ಕಾರ್ಯದರ್ಶಿ ಕೆ.ಸುಷ್ಮ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಸದಸ್ಯರಾದ ಬೊಮ್ಮೇನಹಳ್ಳಿ ಲತಾಹರೀಶ್, ಕನಕದಾಸನಗರ ಶಿವಮ್ಮ, ಕೆ.ಎಸ್.ಆರ್.ಟಿ.ಸಿ ಶಿವಣ್ಣ, ಸಿಂಗನಹಳ್ಳಿ ಗೋಪಾಲ್, ಸಿ.ಆರ್.ಪಿ.ಕುಮಾರ್, ಬೂಕನಕೆರೆ ರೂಪಾಚಂದ್ರಶೇಖರ್, ಬಂಡಿಹೊಳೆ ಯೋಗೇಶ್ (ಉಮೇಶ್), ಹಾಫೀಜ್ ಉಲ್ಲಾ, ಗೋವಿಂದನಹಳ್ಳಿ ಶ್ಯಾಮಣ್ಣ, ಬೂಕನಕೆರೆ ಬಿ.ಸಿ.ಮಾಧು, ದೊಡ್ಡತಾರಹಳ್ಳಿ ಸೋಮಶೇಖರ್, ಶಿವಲಿಂಗಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ವಿಷಯ ನಿರ್ವಾಹಕಿ ನಂದಿನಿ ಇತರರು ಉಪಸ್ಥಿತರಿದ್ದರು.

## ಮಹಾರಾಣಿ ಕಾಲೇಜಿನಲ್ಲಿ ಸಂಶೋಧನ ಕೇಂದ್ರ ಉದ್ಘಾಟನೆ



ಮೈಸೂರು: ಪಡುವಾರಹಳ್ಳಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್, ಎನ್‌ಸಿಸಿ, ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಹಯೋಗದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನೆ ಮಾಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವೆ ಎಂ.ಕೆ.ಸವಿತಾ ಮಾತನಾಡಿ, ಬಹುತೇಕ ವಿದ್ಯಾರ್ಥಿನಿಯರು ಕೃಷಿಕ ಮನೆತನದಿಂದ ಬಂದಿರುತ್ತೀರಿ ನಾನು ಅಂತಹ ರೈತ ಕುಟುಂಬದಿಂದಲೇ ಬಂದು ಸಮಾಜದಲ್ಲಿ ಏಳುಬೀಳುಗಳನ್ನು ಕಂಡು ಬೆಳೆದವಳು. ವಿದ್ಯಾರ್ಥಿ ಜೀವನ ಯಶಸ್ವಿಯಾಗಬೇಕಾದರೆ ಯಾವ ಅಡ್ಡ ಮಾರ್ಗ, ವಾಮ ಮಾರ್ಗ, ಅನೈತಿಕ ದಾರಿಗಳು ನಮ್ಮನ್ನು ದಡ ಮುಟ್ಟಿಸಲಾರವು. ನಮ್ಮ ಪ್ರತಿಭೆ ಮತ್ತು ಪರಿಶ್ರಮಗಳು ಮಾತ್ರ ನಮ್ಮನ್ನು ಯಶಸ್ಸಿನತ್ತ ಕೊಂಡೊಯ್ಯಲು ರಾಜಮಾರ್ಗ ಆಗಬಲ್ಲದು. ನಾವು ಮೊಬೈಲ್ ಗೀಳು ಬೀಳದೆ ಕಾಲೇಜಿನ ಗ್ರಂಥಾಲಯ ಪುಸ್ತಕಗಳು ಮತ್ತು ಶಿಕ್ಷಕರೊಂದಿಗೆ ನಿರಂತರ ಒಡನಾಟದಿಂದ ಮಾತ್ರ ಜ್ಞಾನಾರ್ಜನೆ ಮಾಡಿಕೊಳ್ಳಲು ಸಾಧ್ಯ ಎಂದು ಹೇಳಿದರು.

ರಶ್ಮಿ ಧರ್ಮೇಂದ್ರ ಗಾಯನದಿಂದ ಎಲ್ಲರ ರಂಜಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಡಾ. ಕೆ.ಭಾಸ್ಕರ್ ನಾಯಕ್, ಕಾಲೇಜು ಶಿಕ್ಷಣ ಇಲಾಖೆ ವಿಭಾಗದ ಜಂಟಿ ನಿರ್ದೇಶಕಿ ಪ್ರೊ.ಪ್ರತಿಮಾ, ಮಾನಸ ಗಂಗೋತ್ರಿ ವಾಣಿಜ್ಯ ಮಂಡಳಿ ಪ್ರಾಧ್ಯಾಪಕ ಪ್ರೊ.ಬಿ.ನಾಗರಾಜು, ಕಾಲೇಜಿನ ಪ್ರಾಂಶುಪಾಲ ಪ್ರೊ.ಸಿ.ನಟರಾಜ್, ಸಾಂಸ್ಕೃತಿಕ ಸಂಚಾಲಕ ಪ್ರೊ.ಪಿ.ಶಿವಣ್ಣ, ಖಜಾಂಚಿ ಪ್ರೊ.ಪಿ.ರಾಘವೇಂದ್ರ, ಸಂಚಾಲಕ ಡಾ.ಎಸ್.ಮುತ್ತುರಾಜ, ಡಾ. ಎಂ.ವೀಣಾ, ಪ್ರೊ.ತೇಜಸ್ವಿನಿ ಉಪಸ್ಥಿತರಿದ್ದರು.

# ಜೀವಸಂಕುಲದ ಉಜ್ವಲ ಭವಿಷ್ಯಕ್ಕಾಗಿ ಪ್ರಕೃತಿಯನ್ನು ಉಳಿಸಿ

ಚಾಮರಾಜನಗರ,ನಾವು ಪ್ರಕೃತಿಯನ್ನು ರಕ್ಷಿಸಿದರೆ ಪ್ರಕೃತಿ ನಮ್ಮನ್ನು ರಕ್ಷಿಸಲಿದ್ದು, ಜೀವಸಂಕುಲದ ಉಜ್ವಲ ಭವಿಷ್ಯಕ್ಕಾಗಿ ಪ್ರಕೃತಿಯನ್ನು ನಾವೆಲ್ಲರೂ ಉಳಿಸಬೇಕಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದೊರೆರಾಜು ಅವರು ತಿಳಿಸಿದರು.

**ಡಿ.ಐ.ಸಿ ಜಂಟಿ ನಿರ್ದೇಶಕರಾದ ದೊರೆರಾಜು**

ನಗರದ ಜೆ.ಎಸ್.ಎಸ್ ಮಹಿಳಾ ಪ್ರಥಮದರ್ಜೆ ಕಾಲೇಜಿನಲ್ಲಿಂದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರಿನ ಕೆಸಿಟಿಯು ಟೆಕ್ಸಾಕ್ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ ಸಹಯೋಗದಲ್ಲಿ ಎಂ.ಎಸ್.ಎಂ.ಇ.ಗಳ ಕಾರ್ಯಕ್ಷಮತೆ ಹೆಚ್ಚಿಸಿ ವೇಗಗೊಳಿಸುವ (ಆರ್.ಎ.ಎಂ.ಪಿ) ಯೋಜನೆಯಡಿ ಇ.ಎಸ್.ಎಂ. ಯೋಜನೆ ಕುರಿತು ಹಮ್ಮಿಕೊಳ್ಳಲಾಗಿದ್ದ ಅರಿವು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಪರಿಸರ ಸಂರಕ್ಷಣೆಗೆ ಸರ್ಕಾರವು ಸಾಕಷ್ಟು ಯೋಜನೆಗಳನ್ನು ರೂಪಿಸಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅಪರಿಮಿತವಾಗಿ ವ್ಯರ್ಥವಾಗುವ ಶಕ್ತಿಯ ಮೂಲಗಳನ್ನು ಉಳಿಸಿ ಪರಿಸರದಲ್ಲಿ ಸಮತೋಲನ ಕಾಪಾಡುವುದು



ಪರಿಸರ ಮತ್ತು ಸಾಮಾಜಿಕ ನಿರ್ವಹಣೆ ಯೋಜನೆಯ ಸದುದ್ದೇಶವಾಗಿದೆ. ಈ ಯೋಜನೆಯಡಿ ನವಉದ್ಯಮ ಆರಂಭಿಸುವವರಿಗೆ ಪರಿಸರ, ಸಾಮಾಜಿಕ ಕಳಕಳಿಯ ಅರಿವು ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಎಂದರು.

ಇ.ಎಸ್.ಎಂ. ಯೋಜನೆಯು ಮುಖ್ಯವಾಗಿ ಕಾರ್ಖಾನೆಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕ ಅಥವಾ ಕೊಳಚೆ ಸಂಸ್ಕರಣಾ ಘಟಕ (ಇ.ಟಿ.ಪಿ.) ಸ್ಥಾಪಿಸಿ ಕೈಗಾರಿಕೆಗಳ ತ್ಯಾಜ್ಯ ನೀರನ್ನು ಪರಿಸರಕ್ಕೆ ಬಿಡುವ ಮೊದಲು ಅದನ್ನು ಶುದ್ಧೀಕರಿಸುವ ಪ್ರಕ್ರಿಯೆಯಾಗಿದೆ. ಕೈಗಾರಿಕಾ ತ್ಯಾಜ್ಯದ ನೀರಿನಲ್ಲಿರುವ ಮಾಲಿನ್ಯಕಾರಕಗಳನ್ನು ತೆಗೆದು ನೀರಿನ ಗುಣಮಟ್ಟವನ್ನು ಸುಧಾರಿಸಿ ಪರಿಸರ ಮತ್ತು ಮಾನವನ ಆರೋಗ್ಯಕ್ಕೆ ಹಾನಿಯಾಗುವುದನ್ನು ತಡೆದು ನೀರನ್ನು ಪುನರ್ಬಳಕೆ ಮಾಡುವುದೇ ಆಗಿದೆ ಎಂದರು.

ವೇಸ್ಟ್ ಮ್ಯಾನೇಜ್ಮೆಂಟ್ ಯೋಜನೆಯಡಿ ಕಸ ಸಂಗ್ರಹಿಸಿ, ವಿಂಗಡಿಸಿ, ಸಂಸ್ಕರಿಸುವುದು ಮತ್ತು ಸುರಕ್ಷಿತವಾಗಿ ವಿಲೇವಾರಿ ಮಾಡುವ ಅಥವಾ ಮರುಬಳಕೆ ಮಾಡಲಾಗುತ್ತದೆ. ಪರಿಸರ ಮತ್ತು ಸಾಮಾಜಿಕ ನಿರ್ವಹಣೆಯಲ್ಲಿ ಶ್ರೀಮಂತ, ಬಡವ ಎಂಬುದಿಲ್ಲ. ಸ್ವಂತ ಕಾರ್ಖಾನೆ ಅಥವಾ ಉದ್ಯಮ ಸ್ಥಾಪಿಸಲು ಸರ್ಕಾರದ ವಿವಿಧ ಯೋಜನೆಗಳಲ್ಲಿ ಸಾಲ ಸೌಲಭ್ಯಗಳು ದೊರೆಯುತ್ತಿವೆ. ಜೊತೆಗೆ ಮಹಿಳೆಯರಿಗೆ ಶೇ. 33ರಷ್ಟು ವಿಶೇಷ ಸೌಲಭ್ಯಗಳಿವೆ. ಉದ್ಯಮಗಳು ಸ್ಥಾಪನೆಯಾದರೆ ನಿರುದ್ಯೋಗ ಸಮಸ್ಯೆ ದೇಶದಲ್ಲಿ ಕಣ್ಮರೆಯಾಗಲಿದೆ ಎಂದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕರಾದ ಬಿ. ವಿಜಯಕುಮಾರ್ ಮಾತನಾಡಿ ಸರ್ಕಾರವು ಎಂ.ಎಸ್.ಎಂ.ಇ ಯೋಜನೆ ಮೂಲಕ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಪ್ರತಿ ಜಿಲ್ಲೆಯಲ್ಲಿ 16 ಬಗೆಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ. ನವಉದ್ಯಮಿಗಳಿಗೆ ಸರ್ಕಾರದಿಂದ ಶೇ. 30ರಷ್ಟು ಸಹಾಯಧನ ನೀಡಲಾಗುತಿದ್ದು, ವಿದ್ಯಾರ್ಥಿಗಳು ಭವಿಷ್ಯದಲ್ಲಿ ಸ್ವಯಂ ಉದ್ಯೋಗಿಯಾಗಲು ಉದ್ಯಮ ಸ್ಥಾಪನೆ ಬಗೆಗೆ ಹೆಚ್ಚಿನ ಮಾಹಿತಿ ತಿಳಿದಿರಬೇಕು. ಪ್ರಧಾನಮಂತ್ರಿ ಎಂಪ್ಲಾಯ್ಮೆಂಟ್ ಜನರೇಶನ್ ಪ್ರೊ?ಗ್ರಾಮ್ ಮೂಲಕ ನವಉದ್ಯಮಿಗಳು ಇನ್ವೆಸ್ಟ್ ಕರ್ನಾಟಕ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು.

ಆಲ್ ಇಂಡಿಯಾ ಗ್ರಾನೈಟ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಜಿ.ಎಂ ಹೆಗಡೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿ ಉಪ ಪರಿಸರ ಅಧಿಕಾರಿ ಡಾ. ಶೃತಿ ಮತ್ತು ಸ್ಟಾಕ್ ಮಾರ್ಕೆಟಿಂಗ್ ನಿರ್ದೇಶಕರಾದ ಎಸ್.ಎಸ್. ಮೂರ್ತಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕಾಳಜಿ ಇಲ್ಲದ ಶಾಸಕರು

## ಗಣೇಶ್ ಪ್ರಸಾದ್ ಮೇಲೆ ಮಾಜಿ ಶಾಸಕರ ಆರೋಪ

ಗುಂಡ್ಲುಪೇಟೆ: ಸ್ಥಳೀಯ ಶಾಸಕರಾದ ಗಣೇಶ್ ಪ್ರಸಾದ್ ರವರಿಗೆ ರೈತರ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲ ರೈತರ ಬಗ್ಗೆ ಅಸಡ್ಡೆಯ ಮನಸ್ಥಿತಿ ಹೊಂದಿದ್ದಾರೆ. ಇವರ ಎರಡುವರೆ ವರ್ಷದ ಆಳ್ವಿಕೆಯಲ್ಲಿಯೇ ಇದಕ್ಕೆ ಉದಾಹರಣೆ ಎಂದು ಗುಂಡ್ಲುಪೇಟೆಯಲ್ಲಿ ಮಾಜಿ ಶಾಸಕರಾದ ಸಿ ಎಸ್ ನಿರಂಜನ್ ಕುಮಾರ್ ರವರು ಅಭಿಪ್ರಾಯಪಟ್ಟರು.

ಇಂದು ಪಟ್ಟಣದ ಹೊಸ ಪ್ರವಾಸಿಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಹಾಲಿ ಶಾಸಕರು ತಮ್ಮ ಅಧಿಕಾರ ಅವಧಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದೆ ತಾಲ್ಲೋಕನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದ್ದಾರೆ. ರೈತರು ಕೆರೆಗಳಿಗೆ ನೀರಿಲ್ಲದೆ ಬವಣೆ ಪಡುತ್ತಿದ್ದಾರೆ ಎರಡುವರೆ ವರ್ಷ ಅಧಿಕಾರ ನಡೆಸಿ ರೈತರ ಈ ಬೇಡಿಕೆಯನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡದೇ ಅಸಡ್ಡೆ ತೋರಿದ ಪರಿಣಾಮ ರೈತ ಸಂಘಟನೆಗಳು ಕಳೆದ ಒಂದು ತಿಂಗಳಿನಿಂದಲೂ ತಾಲ್ಲೋಕು ಕಛೇರಿಯ ಮುಂದೆ ಧರಣಿ ನಡೆಸುತ್ತಿದ್ದಾರೆ. ಈ ಪ್ರತಿಭಟನಾ ಸ್ಥಳಕ್ಕೆ ಕೇವಲ ನಾಮಕವಾಸ್ಥಗೆ ಬೇಟಿ ನೀಡಿರುವ ಶಾಸಕರು ರೈತರ ಬೇಡಿಕೆ ಈಡೇರಿಸುವಲ್ಲಿ ವಿಫಲವಾಗಿದ್ದಾರೆ. ಶಾಸಕರ ಈ ಧೋರಣೆ ಖಂಡಿಸಿ ನಮ್ಮ ಪಕ್ಷದ ವತಿಯಿಂದ ರೈತರ ಹೋರಾಟಕ್ಕೆ ಬೆಂಬಲ ಸೂಚಿಸುವ ಸಲುವಾಗಿ ನಮ್ಮ ಪಕ್ಷದ ರಾಜ್ಯ ನಾಯಕರ ನೇತೃತ್ವದಲ್ಲಿ ಯಶಸ್ವಿ ಕಾಲ್ನಡಿಗೆ ಜಾಥಾ ಹಮ್ಮಿಕೊಂಡಿದ್ದೆವು. ಇದಾದ ಒಂದು ವಾರದ ನಂತರ ಮಾನ್ಯ ಶಾಸಕರು ಒಂದು ಪತ್ರಿಕಾಗೋಷ್ಠಿ ಏರ್ಪಡಿಸಿದ್ದರು. ನಾವುಗಳು ಈ ಪತ್ರಿಕಾಗೋಷ್ಠಿಯಲ್ಲಿ ರೈತರ ಬೇಡಿಕೆ ಈಡೇರಿಸುವ ಭರವಸೆ ನೀಡಬಹುದು, ಜೊತೆಗೆ ಎರಡುವರೆ ವರ್ಷ ಆಡಳಿತ ನಡೆಸಿ ಒಂದೇ ಒಂದು ಕೆರೆಗೂ ನೀರು ತುಂಬಿಸಲಾಗಿಲ್ಲದಿರುವುದಕ್ಕೆ ಕ್ಷಮೆ ಕೋರಬಹುದು ಎಂದು ಭಾವಿಸಿದ್ದವು. ಆದರೆ ಮಾನ್ಯ ಶಾಸಕರು ಇಡೀ ಪತ್ರಿಕಾಗೋಷ್ಠಿಯಲ್ಲಿ ರೈತರ ಪರ



### ನನ್ನನ್ನು ಪೆದ್ದ ಎಂದು ಹೇಳುವ ಮೂಲಕ ತಮ್ಮ ದಡ್ಡತನವನ್ನು ತೋರಿಸಿಕೊಂಡಿದ್ದಾರೆ

**ನನ್ನನ್ನು ಪೆದ್ದ ಎಂದು ಹೇಳುವ ಮೂಲಕ ತಮ್ಮ ದಡ್ಡತನವನ್ನು ತೋರಿಸಿಕೊಂಡಿದ್ದಾರೆ. ಇವರ ಎರಡು ವರೆ ವರ್ಷದ ಆಳ್ವಿಕೆಯಲ್ಲಿ ಇವರೆಂತಹ ಪೆದ್ದರು ಎಂಬುದನ್ನ ಕ್ಷೇತ್ರದ ಜನರಿಗೆ ತೋರಿಸಿಕೊಂಡಿದ್ದರೆ. ನಮ್ಮ ಸರ್ಕಾರದ ಕಾಲದಲ್ಲಿ ಎಲ್ಲಾ ಕೆರೆಗಳಿಗೂ ನೀರು ತುಂಬಿಸಿ ಬರಡಾಗಿದ್ದ ಭೂಮಿಯಲ್ಲಿ ನೀರು ಬರುವಂತೆ ಮಾಡಿದ್ದೆವೆ. ಅಂತರ್ಜಲದ ಮಟ್ಟ ಏರಿಕೆಯಾಗಿದೆ. ನಾವು ಮಾಡಿದ ಬಹುಪಾಲು ಕೆಲಸಗಳನ್ನ ನಾವೇ ಮಾಡಿದ್ದು ಎಂದು ಸುಳ್ಳು ಹೇಳುವ ಶಾಸಕರು ಈ ಬಗ್ಗೆ ದಾಖಲೆಗಳಿದ್ದರೆ ತೋರಿಸಲಿ. ಕೆರೆಗಳಿಗೆ ನೀರು ತುಂಬಿಸಿದ್ದಿರಬಹುದು, ಅಂಬೇಡ್ಕರ್ ವಸತಿ ಶಾಲೆಗೆ ಅನುದಾನ ಬಿಡುಗಡೆ ಮಾಡಿದ್ದು ನಮ್ಮ ಸರ್ಕಾರವೇ ಹೊರತು ಕಾಂಗ್ರೆಸ್ ಸರ್ಕಾರವಲ್ಲ. ಆದರೆ ನಿಮ್ಮ ಆಳ್ವಿಕೆಯಲ್ಲ ಕೇವಲ ಕಮ್ಮರಹಳ್ಳಿ ಕೆರೆಗೆ ನೀರು ತುಂಬಿಸಿಕೊಂಡು ನಿಮ್ಮ ಜಮೀನಿಗೆ ಅನುಕೂಲ ಮಾಡಿಕೊಂಡಿರುವ, ನಿಮ್ಮ ಕ್ವಾರಿಗೆ ರಸ್ತೆ ಮಾಡಿಕೊಳ್ಳಲು ಅನುದಾನ ಹಾಕಿಸಿಕೊಂಡಿರಿ ಇಷ್ಟು ಮುತುವರ್ಜಿ ರೈತರಿಗೆ ಯಾಕೆ ತೋರಿಸಲಿಲ್ಲ ನಿಮ್ಮಂತಹ ಸ್ವಾರ್ಥ ಆಡಳಿತವನ್ನು ನಾವು ಮಾಡಿಲ್ಲ. ಸುಮ್ಮನೇ ಸುಳ್ಳು ಹೇಳುವುದನ್ನು ಬಿಟ್ಟು ಇನ್ನು ಮುಂದಾದರೂ ನಮ್ಮ ಕ್ಷೇತ್ರದ ಜನರ ಪರವಾಗಿ ಕೆಲಸ ಮಾಡಿ ಎಂದು ತೀವ್ರ ವಾಗ್ದಾಳಿ ನಡೆಸಿದರು.**

ಒಂದು ಮಾತನ್ನೂ ಆಡದೇ ಕಾಲ್ನಡಿಗೆ ಜಾಥಾದಲ್ಲಿ ನಮ್ಮ ರಾಜ್ಯನಾಯಕರುಗಳು ಮಾತಾಡಿರುವುದರ ಬಗ್ಗೆ ಕೇವಲ ರಾಜಕೀಯ ಪ್ರೇರಿತ ಮಾತುಗಳನ್ನಾಡಿರುವುದು ಖಂಡನೀಯ. ಶಾಸಕರು ನೆಟ್ಟಗೆ ಆಡಳಿತ ನಡೆಸಿದ್ದರೆ ರಾಜ್ಯನಾಯಕರುಗಳು ಈ ಕ್ಷೇತ್ರಕ್ಕೆ ಯಾಕೆ ಬರುತ್ತಿದ್ದರು? ಒಂದು ತಿಂಗಳಿನಿಂದ ರೈತರು ಧರಣಿ ನಡೆಸುತ್ತಿದ್ದಾರೆ ಎಂದರೆ ನಮ್ಮ ಕ್ಷೇತ್ರದ ಮಾನ ರಾಜ್ಯಮಟ್ಟದಲ್ಲಿ ಹೋಗುವುದಿಲ್ಲ? ಎಂತಹ ದುರ್ಬಲ ಶಾಸಕರು ಗುಂಡ್ಲುಪೇಟೆಯಲ್ಲಿದ್ದಾರೆ ಎಂದು ಆಡಿಕೊಳ್ಳುವುದಿಲ್ಲವೇ? ಮಾನ್ಯರು ಪತ್ರಿಕಾಗೋಷ್ಠಿ ತುಂಬಾ ಬರೀ ಸುಳ್ಳನ್ನೇ ಹೇಳಿದ್ದಾರೆ ಎಂದರು

ಪತ್ರಿಕಾಗೋಷ್ಠಿಯಲ್ಲಿ ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಹಿರಿಯ ಮುಖಂಡ ಅಗತಗೌಡನಹಳ್ಳಿ ಬಸವರಾಜು, ಪುರಸಭೆ ಸದಸ್ಯ ನಾಗೇಶ್, ಹಿರಿಯ ಮುಖಂಡ ಮಹದೇವಶೆಟ್ಟಿ, ಹನೀಫ್, ಮಹೇಂದ್ರ,ಮಹೇಶ್ ಕಿರಣ್ ಮುಂತಾದವರು ಭಾಗವಹಿಸಿದ್ದರು.

## ಮಸಣಮ್ಮ ದೇವಸ್ಥಾನದಲ್ಲಿ ಹುಂಡಿ ಕಳ್ಳತನ

ಚಾಮರಾಜನಗರ: ತಾಲೂಕಿನ ಕೊಕ್ಕನಹಳ್ಳಿ ಗ್ರಾಮದಲ್ಲಿರುವ ಸುಡುಗಾಡು ಮಸಣಮ್ಮ ದೇವಸ್ಥಾನದಲ್ಲಿ ದೇವಸ್ಥಾನದ ಬೀಗ ಒಡೆದು ಹುಂಡಿ ಕಳವು ಮಾಡಿರುವ ಘಟನೆ ಬುಧವಾರ ರಾತ್ರಿ ಸಂಭವಿಸಿದೆ.

ಕೊಕ್ಕನಹಳ್ಳಿ ಗ್ರಾಮದ ದೇವಸ್ಥಾನದ ಗೇಟ್ ಬೀಗ ಒಡೆದು ಒಳ ನುಗ್ಗಿದ್ದ ಕಳ್ಳರು ಹುಂಡಿ ಹಣವನ್ನು ಕಳುವು ಮಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿದ ಕೂಡಲೇ ರಾಮಸಮುದ್ರ ಠಾಣೆಯ ಪೊಲೀಸರು ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಸಂಬಂಧ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಾಳೆ ರಕ್ತದಾನ ಶಿಬಿರ

ಮೈಸೂರು: ಡಾ.ಪಿ.ಬೋರೇಗೌಡ ಮತ್ತು ಪ್ರಭಾ ಪ್ರತಿಷ್ಠಾನದ ವತಿಯಿಂದ ನ. 16 ರ ಬೆಳಗ್ಗೆ 10.30ಕ್ಕೆ ನಗರದ ವಿದ್ಯಾವರ್ಧಕ ಕಾಲೇಜಿನಲ್ಲಿ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಲೋಕೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜೆಎಸ್ಎಸ್ ರಕ್ತನಿಧಿ ಹಾಗೂ ಕೆ.ಆರ್. ಆಸ್ಪತ್ರೆ ರಕ್ತನಿಧಿ ಕೇಂದ್ರಗಳ ಸಹಯೋಗದಲ್ಲಿ ಈ ಶಿಬಿರ ಆಯೋಜಿಸಲಾಗಿದೆ. ಪಾಲಿಕೆ ಆಯುಕ್ತ ತನ್ವೀರ್ ಆಸಿಫ್, ದುರ್ಗೇಶ್ ಎಂ. ಹಟ್ಟಿ, ಪಿ. ವಿಶ್ವನಾಥ್, ಡಾ.ಸಿ.ಪಿ. ಕುಮ್ಮಸ್ವಾಮಿ, ಕೆ. ನರಸಿಂಹಮೂರ್ತಿ ಅತಿಥಿಗಳಾಗಿರುವರು. ಈ ವೇಳೆ 101 ಬಾರಿ ರಕ್ತದಾನ ಮಾಡಿದ ಡಾ. ತ್ಯಾಗರಾಜ್ ಅವರನ್ನು ಸನ್ಮಾನಿಸಲಾಗುವುದೆಂದರು. ಪ್ರಬೋಧ್, ಕೆ.ಬಿ. ಪ್ರದ್ಯುಮ್ನ ಇದ್ದರು.




## ಜಿಲ್ಲಾ ಪತ್ರಕರ್ತ ಸಂಘದ ನಿರ್ದೇಶಕರಿಗೆ ಸನ್ಮಾನ



ಗುಂಡ್ಲುಪೇಟೆ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಗೆಲುವು ಸಾಧಿಸಿ ನಿರ್ದೇಶಕರಾಗಿ ಆಯ್ಕೆಯಾದ ಗುಂಡ್ಲುಪೇಟೆ ತಾಲೂಕಿನ ವಿಜಯ ಕರ್ನಾಟಕ ಪತ್ರಿಕೆ ವರದಿಗಾರರಾದ ಮಡಹಳ್ಳಿ ಮಹೇಶ್ ಮತ್ತು ಪ್ರಜಾವಾಣಿ ಪತ್ರಿಕೆ ವರದಿಗಾರರಾದ ಎಂ.ಮಲ್ಲೇಶ್ ಅವರಿಗೆ ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಅಭಿನಂದಿಸಿ, ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಂಡಲಾಧ್ಯಕ್ಷ ಮಹದೇವಪ್ರಸಾದ್, ಪ್ರಣಯ್, ಬಸವರಾಜು, ನಾಗೇಶ್,ಮಹದೇವಶೆಟ್ಟಿ, ಮಹೇಂದ್ರ, ಸಾಗರ್, ನಂಜುಂಡಸ್ವಾಮಿ, ಪ್ರವೀಣ್, ಮತ್ತಿತರರಿದ್ದರು.

## ಬಿಹಾರದಲ್ಲಿ ಬಿಜೆಪಿ ಪ್ರಚಂಡ ಗೆಲುವು: ಸಂಭ್ರಮಾಚರಣೆ



ಗುಂಡ್ಲುಪೇಟೆ: ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಪ್ರಚಂಡ ಗೆಲುವು ಸಾಧಿಸುತಿದ್ದಂತೆ ಗುಂಡ್ಲುಪೇಟೆ ಪಟ್ಟಣದ ಎಂಡಿಸಿಸಿ ಸರ್ಕಲ್ ನಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ನಂತರ ಮಾತನಾಡಿದ ಮಾಜಿ ಶಾಸಕ ನಿರಂಜನ್ ಕುಮಾರ್ ಪ್ರದಾನಿ ನರೇಂದ್ರ ಮೋದಿ ಅಧಿಕಾರದಲ್ಲಿ ದೇಶದ ಅಭಿವೃದ್ಧಿ ನೋಡಿ ಬಿಹಾರದ ಜನ ಬೆಂಬಲಿಸಿದ್ದಾರೆ ರಾಹುಲ್ ಗಾಂಧಿ ಓಟ್ ಚೋರಿ ಎಂದು ಮಾತಾಡಿದರಲ್ಲ ಅದಕ್ಕೆ ಜನ ಅವರಿಗೆ ಬುದ್ದಿ ಕಳಿಸಿದ್ದಾರೆ ಕರ್ನಾಟಕದಲ್ಲಿ ಓಟ್ ಚೋರ್ ಬಗ್ಗೆ ಸಹಿ ಸಂಗ್ರಹ ಮಾಡಿದ್ದಿರಲ್ಲ ಹಾಗಾದರೆ ಮತಗಳ್ಳತನ ಮಾಡಿ ಕಾಂಗ್ರೆಸ್ 136 ಸ್ಥಾನ ಬಂದಿದೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆಯ ಭಾಗಿಯಾಗಿದ್ದರು

## ಕನಕದಾಸರ ಕೊಡುಗೆ ಅಪಾರ

ಚಾಮರಾಜನಗರ, ಕನಕದಾಸರ ಕೊಡುಗೆ ಅಪಾರವಾದದ್ದು ಎಂದು ಪುಣಜನೂರು ಗ್ರಾಪಂ ಪಿಡಿಒ ಶಿವಪ್ಪನಾಗನಾಥ್ ತಿಳಿಸಿದರು.

ತಾಲೂಕಿನ ಪುಣಜನೂರು ಗ್ರಾಮ ಪಂಚಾಯಿತಿಯಲ್ಲಿ ನಡೆದ ಕನಕದಾಸರ ಜಯಂತಿಯಲ್ಲಿ ಮಾತನಾಡಿದ ಅವರು ಕನಕದಾಸರು ವಿವಿಧ ಕೃತಿಗಳನ್ನು ರಚಿಸಿ ಓದುಗರಿಗೆ ಉತ್ತಮ ಸಂದೇಶ ನೀಡಿದ್ದಾರೆ. ಅಲ್ಲದೆ ಇವರ ಕೀರ್ತನೆಗಳು ಉತ್ತಮವಾಗಿವೆ. ಅವರ ದಾಸ ಸಾಹಿತ್ಯ ಪರಂಪರೆಯು ಶ್ರೇಷ್ಠವಾದದ್ದು ಎಂದು ತಿಳಿಸಿದರು. ಇದೆ ವೇಳೆ ಕನಕದಾಸರ ಕೀರ್ತನೆಗಳ ಕುರಿತು ಗುಣಗಾನ ಮಾಡಿದರು. ಗ್ರಾಮ ಪಂಚಾಯತಿ ಸದಸ್ಯರಾದ ಗೀತಾ ಸಿದ್ಧರಾಜು, ಬಸಮ್ಮ, ಮಹೇಶ್ ನಾಯ್ಕ, ಚಂದ್ರಶೇಖರ್, ಲಲಿತಾಬಾಯಿ, ಕಾರ್ಯದರ್ಶಿ ಎ.ಲಕ್ಷ್ಮಣ್ ನಾಯಕ, ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳ ಮೇಲ್ವಿಚಾರಕ ಸಂಘದ ಜಿಲ್ಲಾಧ್ಯಕ್ಷ ವೆಂಕಟೇಶ್, ಸಿಬ್ಬಂದಿಗಳಾದ ಯೋಗೇಶ್ ನಾಯಕ್, ಮಹಾದೇವನಾಯಕ, ರಾಜೇಶ್ ನಾಯಕ್, ಮುರುಗೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.




**ಪೋಷಕ–ಶಿಕ್ಷಕರ ಮಹಾಸಭೆ**

# ಮಕ್ಕಳಿಗೆ ಶಿಕ್ಷಣ ನೀಡಿ ವಿದ್ಯಾವಂತರನ್ನಾಗಿಸಿ: ಮೋಹನ್ ಜಗದೀಶ್

ಚಾಮರಾಜನಗರ, ಮಕ್ಕಳಿಗೆ ಶಿಕ್ಷಣ ನೀಡಿ ವಿದ್ಯಾವಂತರನ್ನಾಗಿಸಬೇಕು ಎಂದು ಮುಖ್ಯ ಕಾನೂನು ನೆರವು ಅಭಿರಕ್ಷ ಮೋಹನ್ ಜಗದೀಶ್ ಎ ತಿಳಿಸಿದರು.

ನಗರದ ಗಾಳಿಪುರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಮಕ್ಕಾ ಮೊಹಲ್ಲಾ ದಲ್ಲಿ ಮಕ್ಕಳ ದಿನಾಚರಣೆಯ ಅಂಗವಾಗಿ ನಡೆದ ಪೋಷಕ–ಶಿಕ್ಷಕರ ಮಹಾಸಭೆಯಲ್ಲಿ ಮಾತನಾಡಿದ ಅವರು ಮಕ್ಕಳಿಗೆ ತಮ್ಮ ಹಕ್ಕುಗಳ ಅರಿವು ಮುಖ್ಯ, ಮಕ್ಕಳನ್ನು ಬಾಲಕಾರ್ಮಿಕ ಪದ್ಧತಿಯಿಂದ ದೂರ ಇಟ್ಟು ಅವರಿಗೆ ಸೂಕ್ತ ಸೌಲಭ್ಯಗಳನ್ನು ನೀಡಿ ಶಾಲೆಗೆ ಸೇರಿಸಬೇಕು.ಶಿಕ್ಷಣ, ಪೌಷ್ಟಿಕ ಆಹಾರ ದೊರಕುವಂತೆ ಮಾಡಬೇಕು. ಮಕ್ಕಳಿಗೆ ಶಿಕ್ಷಣ ನೀಡಿದಂತೆ ಪೋಕ್ಸೋ ಪ್ರಕರಣ, ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಯಾಗುತ್ತದೆ. ಅತ್ಯಾಚಾರ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ ಅದನ್ನು ಉತ್ತಮ ಶಿಕ್ಷಣ ನೀಡುವ ಮೂಲಕ ಕಡಿಮೆ ಮಾಡಬಹುದು. ಮಗುವಿನ ಮೇಲೆ ಅತ್ಯಾಚಾರ ಪ್ರಕರಣ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ ಇದರ ನಿವಾರಣೆಗೆ ಎಲ್ಲರ




ಸಹಕಾರ ಅಗತ್ಯ. ಅಲ್ಲದೆ ಮಕ್ಕಳು ಫೇಸ್ಬುಕ್, ಇನ್ಸ್ಟಾಗ್ರಾಂ ಉಪಯೋಗಿಸಬಾರದು ಇದರಿಂದ ಹೆಚ್ಚು ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ ಈ ಬಗ್ಗೆ ಕಾನೂನು ಅರಿವು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ ಇದರ ಸದುಪಯೋಗ ಮಾಡಿಕೊಂಡು ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಬೇಕು ಎಂದರು.

ಮಕ್ಕಳ ರಕ್ಷಣಾ ಘಟಕದ ಆಪ್ತ ಸಮಾಲೋಚಕರಾದ ಮೇಘಶ್ರೀ ಮಾತನಾಡಿ, ಮಕ್ಕಳ ರಕ್ಷಣಾ ಘಟಕದ ಉದ್ದೇಶವೇನೆಂದರೆ ತೊಂದರೆಗೊಳಪಟ್ಟ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವುದಾಗಿರುತ್ತದೆ ಅಂದರೆ ತಂದೆ ತಾಯಿ ಇಲ್ಲದ ಮಕ್ಕಳನ್ನು ಓದಿಸುವುದಲ್ಲದೆ ಬಾಲ್ಯವಿವಾಹ, ಪೋಕ್ಸೋ ಪ್ರಕರಣದಲ್ಲಿ ಸಿಲುಕಿದ ಮಕ್ಕಳನ್ನು ಸಹ ಶಾಲೆಗೆ ಸೇರಿಸಿ ಶಿಕ್ಷಣ ನೀಡುವುದಾಗಿರುತ್ತದೆ. ಮಕ್ಕಳಿಗೆ ಶಿಕ್ಷಣ ನೀಡುವುದೇ ಪೋಷಕರ ಪಾತ್ರವಲ್ಲ, ಅದಕ್ಕಿಂತ ಹೆಚ್ಚಾಗಿ ಮಗು ಸೇರಿರುವ ಶಾಲೆಯ ವಾತಾವರಣ ಚೆನ್ನಾಗಿದೆಯೇ? ದಾರಿ ಯಲ್ಲಿ ಮಗು ಹೋಗುವಾಗ ಏನಾದರೂ ಸಮಸ್ಯೆಯಾದಿತ್ಯೇ? ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಮಕ್ಕಳ ಜೊತೆ ಪೋಷಕರು ಹೆಚ್ಚು ಹೆಚ್ಚು ಮಾತನಾಡಿ ವಿಷಯ ತಿಳಿದು ಮಕ್ಕಳ ಸಮಸ್ಯೆಗೆ ಸ್ಪಂದಿಸುವುದು. ಅಲ್ಲದೆ ಸುರಕ್ಷಿತ ಸ್ಪರ್ಶ ಹಾಗೂ ಅಸುರಕ್ಷಿತ ಸ್ಪರ್ಶದ ಬಗ್ಗೆ ಮಕ್ಕಳಿಗೆ ಪೋಷಕರು ತಿಳಿಸಬೇಕು. ನಮ್ಮ ಮಕ್ಕಳ ಭವಿಷ್ಯಕ್ಕೆ ನಾವೇ ಕಾರಣರಾಗಿದ್ದೇವೆ ಆದ್ದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಮಕ್ಕಳನ್ನು ನಾಗರಿಕ ಪ್ರಜೆಯನ್ನಾಗಿ ಮಾಡುವುದು ನಮ್ಮ ಜವಾಬ್ದಾರಿ ಆಗಿರುತ್ತದೆ ಎಂದು ತಿಳಿಸಿದರು.

ಆಪ್ತ ಸಮಾಲೋಚಕರಾದ ಸಿ.ಎಸ್. ನಾಗರಾಜು ಮಾತನಾಡಿ, 0 ಯಿಂದ 18 ವರ್ಷದೊಳಗಿರುವವರನ್ನು ಮಕ್ಕಳೆಂದು ಕರೆಯಲಾಗುತ್ತದೆ ಮಕ್ಕಳ ಸಮಸ್ಯೆಗಳ ನಿವಾರಣೆಗೆ ಮಕ್ಕಳ ಸಹಾಯವಾಣಿ1098 ಎಂಬ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ ಇದರ ಬಳಕೆ ಮುಖ್ಯವಾಗಿದೆ. ಬಾಲ್ಯ ವಿವಾಹ ಕಾನೂನುಬಾಹಿರ, ಇದು ಎಲ್ಲಾ ಸಮುದಾಯಗಳಲ್ಲೂ ನಡೆಯುತ್ತಿದೆ ಇದನ್ನು ತಡೆಗಟ್ಟಲು ಅನೇಕ ಕಾನೂನುಗಳು ರಚನೆಯಾಗಿವೆ ಈ ಬಗ್ಗೆ ಮಕ್ಕಳು ತಿಳಿಯಬೇಕು ಎಂದು ತಿಳಿಸಿದರು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಮೊಹಮ್ಮದ್ ಇಸ್ಮಾಯಿಲ್, ಮಕ್ಕಳ ರಕ್ಷಣಾ ಘಟಕದ ಆಪ್ತ ಸಮಾಲೋಚಕರಾದ ಮೇಘಶ್ರೀ, ನಾಗರಾಜು.ಸಿ.ಎಸ್, ಸಿಆರ್ ಪಿ. ಆಯಿಷಾ ಖಾನಂ, ಮುಖ್ಯ ಶಿಕ್ಷಕಿ ತಬಸ್ಸುಮ್, ಶಿಕ್ಷಕರಾದ ರಾಜೇಶ್ವರಿ ದೇವರಬಾವಿ, ಮಹದೇವ ಸ್ವಾಮಿ, ಫಹೀಮುನ್ನಿಸಾ, ಹಸೀನಾ ಬಾನು, ಆಯಿಷಾ ತಬಸ್ಸುಮ್, ಸೈಯದ್ ಉಮ್ಮೆಕುಲ್ಸುಂ ಸೇರಿದಂತೆ ಇತರರಿದ್ದರು.

# ಅಲೋವೇರಾ ಮಹಿಮೆಗೆ ಭೇಷ್ ಎನ್ನಲೇಬೇಕು



ಅಲೋವೇರಾ ಸಸ್ಯವು ಶತಮಾನಗಳಿಂದ ತನ್ನ ಆರೋಗ್ಯ, ಸೌಂದರ್ಯ, ಔಷಧೀಯ ಮತ್ತು ಚರ್ಮದ ಆರೈಕೆ ಗುಣಗಳಿಗೆ ಹೆಸರುವಾಸಿಯಾಗಿದೆ ಮತ್ತು ಬಳಸಲ್ಪಡುತ್ತಿದೆ. ಅಲೋವೇರಾ ಎಂಬ ಹೆಸರು ಅರೇಬಿಕ್ ಪದ "ಅಲೋಹ್" ನಿಂದ ಬಂದಿದೆ, ಇದರ ಅರ್ಥ "ಹೊಳೆಯುವ ಕಹಿ ವಸ್ತು", ಆದರೆ ಲ್ಯಾಟಿನ್ ಭಾಷೆಯಲ್ಲಿ "ವೆರಾ" ಎಂದರೆ "ಸತ್ಯ". 2000 ವರ್ಷಗಳ ಹಿಂದೆ, ಗ್ರೀಕ್ ವಿಜ್ಞಾನಿಗಳು ಅಲೋವೇರಾವನ್ನು ಸಾರ್ವತ್ರಿಕ ಸರ್ವರೋಗ ನಿವಾರಕ ಎಂದು ಪರಿಗಣಿಸಿದ್ದರು.

ಅಲೋವೇರಾದ ಬಳಕೆಯನ್ನು ಸುಮಾರು 6,000 ವರ್ಷಗಳ ಹಿಂದೆಯೇ ಈಜಿಪ್ಟ್‌ನ ಆರಂಭದಿಂದಲೂ ಗುರುತಿಸಬಹುದು. "ಅಮರತ್ವದ ಸಸ್ಯ" ಎಂದು ಕರೆಯಲ್ಪಡುವ ಅಲೋವೇರಾವನ್ನು ಒಮ್ಮೆ ಫೇರೋಗಳ ಅಂತ್ಯಕ್ರಿಯೆಯ ಸಮಯದಲ್ಲಿ ಉಡುಗೊರೆಯಾಗಿ ನೀಡಲಾಗುತ್ತಿತ್ತು. ಈಜಿಪ್ಟ್ ಹೊರತುಪಡಿಸಿ, ಇತರ ದೇಶಗಳು ಅಲೋವೇರಾವನ್ನು ಅದರ ಆರೋಗ್ಯ ಪ್ರಯೋಜನಗಳಿಂದಾಗಿ ಬಳಸುತ್ತಿವೆ. ಇವುಗಳಲ್ಲಿ ಗ್ರೀಸ್, ಭಾರತ, ಮೆಕ್ಸಿಕೊ, ಜಪಾನ್ ಮತ್ತು ಚೀನಾ ಸೇರಿವೆ.

**ಸಾಂಪ್ರದಾಯಿಕ ಔಷಧ:** ಅಲೋವೇರಾವನ್ನು ಸಾಂಪ್ರದಾಯಿಕ ಔಷಧದಲ್ಲಿ ಚರ್ಮದ ಚಿಕಿತ್ಸೆಯಾಗಿ ಬಳಸಲಾಗುತ್ತದೆ. ಇದರ ಬಳಕೆಯ ಆರಂಭಿಕ ದಾಖಲೆಗಳು ಕ್ರಿಸ್ತಪೂರ್ವ ನಾಲ್ಕನೇ ಸಹಸ್ರಮಾನದಿಂದ ಕಂಡುಬರುತ್ತವೆ.

**ಅಲೋವೇರಾವನ್ನು ಬಳಸುವ ಬಗೆ:**

- **ಅಲೊವೇರಾದ ಎಲೆ ಅಥವಾ ಒಳಗಿನ ಲೋಳೆಯಂತಹ ಅಂಶವನ್ನು ಬಳಸಬಹುದು**
- **ಈ ಲೋಳೆಯ ಅಂಶಕ್ಕೆ ಉಪ್ಪನ್ನು ಸೇರಿಸಿ ಸೇವನೆ ಮಾಡಬಹುದು**
- **ಅಲೋವೇರಾದ ಜ್ಯೂಸ್ ತಯಾರಿಸಿ ಪ್ರತಿದಿನ 5 ರಿಂದ 20 ಎಂಎಲ್‌ನಷ್ಟು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವನೆ ಮಾಡಬಹುದು.**

ಅಲೋವೇರಾ ಜೆಲ್‌ನಲ್ಲಿ ವಿಟಮಿನ್‌ಗಳು, ಖನಿಜಗಳು ಮತ್ತು ಅನೇಕ ಪೋಷಕಾಂಶಗಳಿವೆ, ಇದು ಚರ್ಮ ಮತ್ತು ಕೂದಲನ್ನು ಆರೋಗ್ಯಕರವಾಗಿಡಲು ಸಹಾಯ ಮಾಡುತ್ತದೆ.

ಅಲೋವೇರಾದ ಕೆಲವು ಅದ್ಭುತ ಪ್ರಯೋಜನಗಳ ಬಗ್ಗೆ ನಮಗೆ ತಿಳಿಯೋಣ.

- **ಆಲ್ಕೋಹಾಲ್ ಸೇವನೆಯಿಂದ ಲಿವರ್ ಹಾನಿಯಾಗಿದ್ದರೆ ಅಥವಾ ಹೆಪಟೈಟೀಸ್‌ನಂತಹ ಕಾಯಿಲೆಗಳಿಗೆ ಒಳಗಾದಾಗ ಅಲೋವೇರಾ ಜ್ಯೂಸ್ ಬಹಳ ಒಳ್ಳೆಯದು.**






- **ಆಹಾರ ಸರಿಯಾಗಿ ಜೀರ್ಣವಾಗದೆ ಇದ್ದರೆ ಅಥವಾ ಕರುಳಿನ ಸಮಸ್ಯೆ ಉಂಟಾದಾಗ ಮಲಬದ್ಧತೆ ಸಮಸ್ಯೆ ಉಂಟಾಗುತ್ತದೆ. ಮಲಬದ್ಧತೆ ಉಂಟಾದರೆ ಮೂಲವ್ಯಾಧಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ. ಇದಕ್ಕೆ ಅಲೋವೇರಾ ಉತ್ತಮ ಮದ್ದಾಗಿದೆ. ರಾತ್ರಿ ಮಲಗುವ ಮುನ್ನ ಅಥವಾ ಬೆಳಗ್ಗೆ ಎದ್ದ ತಕ್ಷಣ ಅಲೋವೇರಾ ಜ್ಯೂಸ್‌ನ್ನು ನಿಯಮಿತವಾಗಿ ಸೇವನೆ ಮಾಡುತ್ತಾ ಬಂದರೆ ಮಲಬದ್ಧತೆ ಸಮಸ್ಯೆ ಸರಿಯಾಗುತ್ತದೆ. ಆಗ ಮೂಲವ್ಯಾಧಿ ಸಮಸ್ಯೆ ಕೂಡ ನಿವಾರಣೆಯಾಗುತ್ತದೆ.**
- **ಇಂದಿನ ದಿನಗಳಲ್ಲಿ ಅನೇಕ ಹೆಣ್ಣು ಮಕ್ಕಳು ಅನಿಯಮಿತ ಮುಟ್ಟಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅಂತಹವರು ಅಲೋವೇರಾವನ್ನು ಮದ್ದಾಗಿ ಬಳಸಬಹುದು. ಕೆಲವರಲ್ಲಿ ಸರಿಯಾಗಿ ರಕ್ತಸ್ರಾವವಾಗದ ಸಮಸ್ಯೆ ಇರುತ್ತದೆ. ಅಂತಹವರೂ ಕೂಡ ಅಲೋವೇರಾದ ಜ್ಯೂಸ್ ಸೇವನೆ ಮಾಡಬಹುದು.**
- **ಇಂದಿನ ದಿನಗಳಲ್ಲಿ ಅನೇಕ ಹೆಣ್ಣು ಮಕ್ಕಳು ಅನಿಯಮಿತ ಮುಟ್ಟಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅಂತಹವರು ಅಲೋವೇರಾವನ್ನು ಮದ್ದಾಗಿ ಬಳಸಬಹುದು. ಕೆಲವರಲ್ಲಿ ಸರಿಯಾಗಿ ರಕ್ತಸ್ರಾವವಾಗದ ಸಮಸ್ಯೆ ಇರುತ್ತದೆ. ಅಂತಹವರೂ ಕೂಡ ಅಲೋವೇರಾದ ಜ್ಯೂಸ್ ಸೇವನೆ ಮಾಡಬಹುದು.**
- **ಇಡೀ ದಿನ ಕಂಪ್ಯೂಟರ್, ಮೊಬೈಲ್ ನೋಡಿ ಕಣ್ಣು ದಣಿದಿರುತ್ತದೆ. ಹೀಗಾಗಿ ಅಲೋವಾರಾ ಕಣ್ಣಿಗೆ ರಿಲಾಕ್ಸ್ ಅನುಭವ ನೀಡುತ್ತದೆ. ರಾತ್ರಿ ಮಲಗುವಾಗ ಅಲೋವೇರಾವನ್ನು ಕಣ್ಣಿಗೆ ಹಚ್ಚಿ ಮಗಲಬಹುದು ಅಥವಾ ತಾಜಾ ಅಲೋವೇರಾದ ಲೋಳೆಯ ಅಂಶವನ್ನು ಕಣ್ಣಿನ ಮೇಲಿಟ್ಟು ಒಂದು ಬಟ್ಟೆಯನ್ನು ಕಟ್ಟಿಕೊಂಡು ಮಲಗಿದರೆ ಸುಸ್ತಾದ ಕಣ್ಣಿಗೆ ತಣ್ಣನೆಯ, ಆರಾಮದ ಅನುಭವ ಸಿಗುತ್ತದೆ.**
- **ಇಂದಿನ ದಿನಗಳಲ್ಲಿ ಚಿಕ್ಕ ಮಕ್ಕಳಿಗೆ ಡೈಪರ್ ಹಾಕುವುದು ಸರ್ವೇಸಾಮಾನ್ಯವಾಗಿದೆ. ಆದರೆ ಇದರಿಂದ ಕೆಲವೊಮ್ಮೆ ಮಕ್ಕಳಿಗೆ ತೊಡೆಯ ಭಾಗದಲ್ಲಿ ಕೆಂಪು ಗುಳ್ಳೆಯ ರೀತಿ ಉಂಟಾಗುತ್ತದೆ. ಇದು ತುರಿಕೆ ಮತ್ತು ಉರಿಗೆ ಕಾರಣವಾಗುತ್ತದೆ. ಅದನ್ನು ನಿವಾರಣೆ ಮಾಡಲು ಅಲೋವೇರಾ ಉತ್ತಮ ಮದ್ದಾಗಿದೆ. ಅಷ್ಟೇ ಅಲ್ಲ ದೊಡ್ಡವರಲ್ಲಿ ದೇಹದ ಮೇಲೆ ಅಲರ್ಜಿ, ತುರಿಕೆ, ದದ್ದು ಕಾಣಿಸಿಕೊಂಡರೆ ಅಂತಹ ಸಂದರ್ಭದಲ್ಲಿ ಅಲೋವೇರಾ ಜೆಲ್ ಹಚ್ಚಿದರೆ ಉರಿ, ತುರಿಕೆ ಕಡಿಮೆಯಾಗುತ್ತದೆ.**
- **ಕೆಲವೊಮ್ಮೆ ದೇಹದ ಅತಿಯಾದ ಉಷ್ಣತೆಯಿಂದ ಮೂಗಿನಲ್ಲಿ ರಕ್ತಸ್ರಾವವಾಗುತ್ತದೆ. ಆಗ ದೇಹವನ್ನು ತಂಪುಗೊಳಿಸುವ ಅಗತ್ಯವಿರುತ್ತದೆ. ಅಲೋವೇರಾವನ್ನು ಮೂಗಿನ ಹೊಳ್ಳೆಗೆ ತಾಗಿಸಿದರೆ ಅಥವಾ ತಾಜಾ ಅಲೋವೇರಾವನ್ನು ನೆತ್ತಿಯ ಮೇಲೆ ಹಾಕಿದರೆ ಮೂಗಿನ ರಕ್ತಸ್ರಾವವನ್ನು ನಿಲ್ಲಿಸಬಹುದು.**

**ಗಮನದಲ್ಲಿಡ ಬೇಕಾದ ಅಂಶಗಳು**

- **ಪದಾರ್ಥಗಳಿಗೆ ಅತಿಸೂಕ್ಷ್ಮತೆಯನ್ನು ಹೊಂದಿರಬಹುದು. ಅಲ್ಲದೆ, ಅಲೋವೇರಾ ಜೆಲ್ ಅನ್ನು ದೀರ್ಘಕಾಲದವರೆಗೆ ಬಳಸುವುದರಿಂದ ಉರಿಯೂತ ಮತ್ತು ಜೇನುಗೂಡುಗಳಂತಹ ಚರ್ಮದ ಅಲರ್ಜಿಗಳು ಉಂಟಾಗಬಹುದು.**





- **ಅಲೋವೇರಾವನ್ನು ವಿರೇಚಕವಾಗಿ ಅಥವಾ ಜೀರ್ಣಕ್ರಿಯೆಗಾಗಿ ಬಳಸಿದ ಕೆಲವು ಜನರು ಹೊಟ್ಟೆಯಲ್ಲಿ ಅಸ್ವಸ್ಥತೆ ಮತ್ತು ಅತಿಸಾರವನ್ನು ಉಂಟು ಮಾಡಬಹುದು.**
- **ಅಲೋವೇರಾ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಆದರೆ, ಮಧುಮೇಹ ಹೊಂದಿರುವ ಜನರು ತಮ್ಮ ರಕ್ತದಲ್ಲಿನ ಗ್ಲೂಕೋಸ್ ಅನ್ನು ಕಡಿಮೆ ಮಾಡಲು ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದರೆ ಅವರು ಅಲೋವನ್ನು ತೆಗೆದುಕೊಳ್ಳುತ್ತಿದ್ದರೆ, ರಕ್ತದಲ್ಲಿನ ಸಕ್ಕರೆ ಅಪಾಯಕಾರಿ ಮಟ್ಟಕ್ಕೆ ಇಳಿಯುವುದನ್ನು ತಡೆಯಲು ಜಾಗರೂಕರಾಗಿರಬೇಕು.**
- **ಗರ್ಭಧಾರಣೆ ಮತ್ತು ಹಾಲುಣಿಸುವ ಮಹಿಳೆಯರು ಇದರ ಸೇವೆನೆಯು ಅಪಾಯಕಾರಿ.ಗರ್ಭಾಶಯದ ಸಂಕೋಚನದ ಸೈದ್ಧಾಂತಿಕ ಪ್ರಚೋದನೆಗಾಗಿ ಹಾಗೂ ಹಾಲುಣಿಸುವ ತಾಯಂದಿರಲ್ಲಿ, ಇದು ಕೆಲವೊಮ್ಮೆ ಶಿಶುವಿನಲ್ಲಿ ಜಠರಗರುಳಿನ ತೊಂದರೆಗೆ ಕಾರಣವಾಗಬಹುದು.**

ಅಲೋವೇರಾ ಅನೇಕ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ ಯಾದರೂ ಅದರ ಅದ್ಭುತ ಉಪಯೋಗಗಳ ಜೊತೆಗೆ ಅದರ ಬಳಕೆಯ ಬಗ್ಗೆ ಜಾಗರೂಕರಾಗಿರಬೇಕು.



**ಸೌಮ್ಯಸನತ್**

## ಪದಬಂಧ



### ಎಡದಿಂದ ಬಲಕ್ಕೆ.....

1. ಈ ಸಾಟಿ ಇಲ್ಲದ್ದರಲ್ಲಿ ಮಾನವಿದೆ.....(4)
3. ಅಧಿಕವಾಗಿ, ಮಿತಿಮೀರಿದ್ದಿದ್ದು....(4)
5. ಹೇರಳವಾದದ್ದು, ಇಲ್ಲಿ ಚೆಲ್ಲಾಪಿಲ್ಲಿಯಾಗಿದೆ....(3)
7. ವಿಧೇಯವಾಗಿ ಇರುವವರಿಗೆ ಇಡಬಹುದಾದ ಹೆಸರಿದು....(3)
9. ಹಡಗನ್ನು ಬಂಧಿಸುವ ಸ್ಥಳವಿದು.....(3)
10. ಯಾವ ವಿಷಯದಲ್ಲಾದರೂ ಅತ್ಯುನ್ನತ ಮಟ್ಟದ್ದು ಎನ್ನುವುದರಲ್ಲಿ ಪತ್ನಿಯ ಪಿತನಿದ್ದಾನೆ.....(5)
11. ಯಜ್ಞ-ಯಾಗಗಳಲ್ಲಿ ಅಗ್ನಿಯ ಮುಖಾಂತರ ದೇವರಿಗರ್ಪಿಸುವುದು.....(3)
12. ತರತರವಾಗಿ ಮಾಡಿದ ಕೀಟಲೆ.....(3)
14. ಸಾಕಾರವಾದ ಸ್ವಪ್ನ......(3)
16. ಕಿವಿಗೆ ಇಂಪಾಗಿದ್ದರಲ್ಲಿ ಜೇನಡಗಿದೆ.....(4)
17. ಬಾಯಾರಿ ಆದ ದಾಹವಿದು.....(4)

### ಮೇಲಿನಿಂದ ಕೆಳಕ್ಕೆ.....

1. ಈ ಸಂಶಯದಲ್ಲಿ ಮಾನವಿದೆಯಲ್ಲ.....(4)
2. ಸೊಗಸಾದ ಹಾಡುಗಾರಿಕೆ ಇಲ್ಲಿ ತಲೆಕೆಳಗಾಗಿದೆ.....(3)
3. ರೋಧಿಸುವಂತೆ ಮಾಡಿದ ಹಗೆತನವಿದು.....(3)
4. ಮಾಡಿದ ಆಕ್ಷೇಪಣೆಯಲ್ಲಿ ಈ ವಾಹನಕ್ಕೇನು ಕೆಲಸ......(4)
6. ಸರಿಸಮವಾಗದಿದ್ದಕ್ಕೆ ಆದ ಅಸಂತೃಪ್ತಿ.....(5)
8. ದೇವರನೊಲಿಸಲು ಮುನಿಗಳು ಮಾಡುತ್ತಿದ್ದ ತೀವ್ರ ಧ್ಯಾನದ ಒಂದು ಪರಿ.....(3)
9. ಸೆರೆಯಾದವನೇ ಈತ.....(3)
11. ಈ ಪುಟ್ಟ ಕಂದನಲ್ಲಿ ಗೋವೂ ಇದೆ.....(4)
13. ಲೆಕ್ಕ ಬರೆದಿದ್ದು ಈ ಲೇಖನಿಯಲ್ಲೇ.....(4)
14. ಗರ ಬಡಿದಂತಿರುವ ಪಟ್ಟಣವೆ ಇದು?.....(3)
15. ಆಂಗ್ಲದ ಸಾನೆಟ್, ಕನ್ನಡದಲ್ಲಿ ಕಲಸುಮೇಲೋಗರವಾಗಿದೆ.....(3)



**ಜ್ಯೋತಿ ರಾಜೇಶ್**

# ಬದುಕಿದ್ದವರನ್ನೂ ಸಾಯಿಸುವ "ಸುದ್ದಿ ಅತ್ಯಾಚಾರಿ"ಗಳ ಹೆಜ್ಜೆಗೆ ತಾಳಹಾಕುವ ಮುನ್ನ...!

ಎಲ್ಲರಿಗಿಂತ ಮೊದಲು ಒಂದು ಸೆನ್ಸೇಷನ್ ಸುದ್ದಿಮುಟ್ಟಿಸುವವರು ತಾವೇ ಆಗಿರಬೇಕೆಂಬ ಒಳತುಡಿತದ ವಿಚಿತ್ರ ಖಯಾಲಿ ಹಾಗೂ ಅದಕ್ಕೆ ವ್ಯಾವಹಾರಿಕ ಲಾಭವೆಂಬ ಸ್ವಾರ್ಥಪರ ಭಂಡತನವೆಂಬುದು ಸೇರಿಕೊಂಡಲ್ಲಿ ಅದು ಉಸಿರಿದ್ದವರನ್ನೂ ಉಸಿರು ನಿಲ್ಲಿಸುವ ಹುಸಿ ಪ್ರಚಾರಕ್ಕೆ ಅನಾಮತ್ತು ತಳ್ಳಿಬಿಡುತ್ತದೆ.!


ಇದಕ್ಕೆ ಲೇಟೆಸ್ಟ್ ಸೇರ್ಪಡೆ. ಬಾಲಿವುಡ್ ಹಿರಿಯ ನಟ ಧರ್ಮೇಂದ್ರ ಇನ್ನೂ ಉಸಿರಾಡುತ್ತಿರುವಾಗಲೇ ಅವರ ಮರಣದ ವಾರ್ತೆಯನ್ನು ಕೆಲವು ಅವಿವೇಕಿ ಮೀಡಿಯಾಗಳು ಹಾಗೂ ಲೈಕು- ಕಾಮೆಂಟುಗಳು ತಂದುಕೊಡುವ ಐಡೆಂಟಿಂಟಿಯ ಹಿಂದೆ ಬಿದ್ದವರು ನಾ ಮುಂದು ತಾ ಮುಂದು ಎಂಬಂತೆ ಸೋಷಿಯಲ್ ಮೀಡಿಯಾಗಳಲ್ಲಿ ವೈರಲ್ ಮಾಡಿ ಲಕ್ಷಾಂತರ ಶ್ರದ್ಧಾಂಜಲಿ ಪೋಸ್ಟ್ ಗಳನ್ನು ಹಂಚಿಕೊಂಡು ಕೋಟ್ಯಂತರ ಖುಖಕ ಮೇಸೇಜುಗಳ ಮಹಾಪೂರವನ್ನೇ ಹರಿಸಿ ಸುದ್ದಿವೀರತ್ವವನ್ನು ಮೆರೆದಿದ್ದರು!

ಆದರೆ ನಟ ಧರ್ಮೇಂದ್ರ ಹನ್ನೆರಡು ದಿನಗಳ ಆಸ್ಪತ್ರೆವಾಸದ ನಂತರ ನಿನ್ನೆ ಅಲ್ಲಿಂದ ಡಿಸ್ ಚಾರ್ಜ್ ಆಗಿ ತಮ್ಮ ಮನೆಗೆ ಮರಳಿದ್ದಾರೆ .ಅವರಿನ್ನೂ ಬದುಕಿದ್ದಾರೆ .

ಈ ಹಿಂದೆ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದ ನಟಿ ಅಭಿನಯ ಶಾರದೆ ಜಯಂತಿಯವರನ್ನೂ ಅವರ ಸಾವಿಗೆ ಮುನ್ನವೇ ಸತ್ತರು ಎಂಬಂತೆ ಸುಳ್ಳುಸುದ್ದಿ ಸುದ್ದಿ ಹರಡಿ ಜಾಲತಾಣಗಳಲ್ಲಿ ಶ್ರದ್ಧಾಂಜಲಿ ಹಂಚಿಕೊಂಡಿದ್ದು ಇಲ್ಲಿ ನೆನಪಾಗುತ್ತಿದೆ. ಧರ್ಮೇಂದ್ರರವರ ವಿಷಯದಲ್ಲೂ ಹೀಗೆಯೇ ಆಗಿದೆ.

ಆಸ್ಪತ್ರೆಯಲ್ಲಿ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ಕೆಲ ಸೆಲೆಬ್ರಿಟಿ ವಿಚಾರಗಳಲ್ಲಿ ಅವರ ಸಾವು ಸಂಭವಿಸುವ ಮೊದಲೇ ಸುಳ್ ಸುದ್ದಿಗಳ ಮೂಲಕ ಅವರನ್ನು ಸಾಯಿಸಿ ವಿಕೃತ ಅನುಭವಿಸುವ ಅಥವಾ ಪುಗಸಟ್ಟೆ ಪ್ರಚಾರ ಪಡೆಯುವ ಖಯಾಲಿಯ ಖಾಯಿಲೆಯಿರುವ ಜನರಿಗೇನೂ ನಮ್ಮನಡುವೆ ಕೊರತೆಯಿಲ್ಲ. ಅದರಲ್ಲೂ ಸಾಮಾಜಿಕ ಜಾಲತಾಣಗಳೇ ಮನುಷ್ಯನ ಸರ್ವಸ್ವವೂ ಆಗಿರುವ ಈ ಹೊತ್ತಿನಲ್ಲಿ ಇಂಥಾ ಸುದ್ದಿಗಳು ಕ್ಷಿಪಣಿಗಳಿಗಿಂಲೂ ವೇಗ ಪಡೆದುಕೊಂಡು ಎಲ್ಲರನ್ನೂ ಕ್ಷಣಾರ್ಧದಲ್ಲಿ ಮುಟ್ಟುತ್ತವೆ.

ಹೀಗೆಲ್ಲಾ ಒಬ್ಬ ವ್ಯಕ್ತಿಯ ಸಾವಿನ ಕುರಿತಾದ ಸುದ್ದಿಯನ್ನು ಖಚಿತ ಪಡಿಸಿಕೊಳ್ಳದೇ ಸುದ್ದಿ ಸೃಷ್ಟಿ ಮಾಡುವ ಕೆಲ ಮೀಡಿಯಾಗಳಿಗೆ ಬೇಕಾಗಿರುವುದು ಒಂದೇ ! ಅದು " ನಾವೇ ಎಲ್ಲರಿಗಿಂತ ಮೊದಲು- ನಮ್ಮಲ್ಲೇಮೊದಲು " ಎಂಬ ಸುದ್ದಿತೆವಲಿನ ಅಮಲು ಹಾಗೂ ಅದರಿಂದ ಸಿಗಬಹುದಾದ ಟಿ.ಆರ್.ಪಿ ಯ ಫಸಲು" ಅಷ್ಟೇ. ! ಹೀಗಾಗಿ ಸುದ್ದಿಯ ಸತ್ಯಾಸತ್ಯತೆಗಿಂತಲೂ ಅದು ಕೊಡುವ ಕಿಕ್ ಅಥವಾ




ಸೃಷ್ಟಿಸುವ ಫೇಕ್ ಹವಾ ಇಂಥಾ ಅವಿವೇಕಿಗಳಿಗೆ ಮುಖ್ಯವಾಗಿರುತ್ತದೆ.

ಆಯ್ತು....ಇಂದಿನ ಬಹುತೇಕ ಡಿಜಿಟಲ್ ಮಾಧ್ಯಮಗಳಿರೋದೇ ಹಾಗೆ ಎಂದಿಟ್ಟುಕೊಳ್ಳೋಣ. ಆದರೆ ಸಾಕಷ್ಟು ವಿದ್ಯಾವಂತರಿರುವ ನಮ್ಮ ಸಮಾಜಕ್ಕೆ ಏನಾಗಿದೆ ? ಯಾವನೋ ಒಬ್ಬ ಸೃಷ್ಟಿಸಿ ತೇಲಿಬಿಟ್ಟ ಕಿಕ್ ಕೊಡುವ ರೋಚಕ ಸುದ್ದಿಗಳನ್ನು ಅದರ ಮೂಲ-ಜಾಲ ಯಾವುದೊಂದನ್ನೂ ನೋಡದೇ ಸುಖಾಸುಮ್ಮನೇ ಫಾರ್ವರ್ಡ್ ಮಾಡಿ ಕೈ ತೊಳೆದು ಕೊಳ್ಳುವುದಿದೆಯಲ್ಲಾ...ಬಹುಶಃ ಬಹುಜನರ ಈ ಅದ್ಭುತ ವೀಕ್‌ನೆಸ್ಸನ್ನು ಹಿಡಿದೇ ಕೆಲ ಮಾಧ್ಯಮಗಳು, ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥದ ಬೇಳೆಯನ್ನು ನಿಶ್ಚಿಂತೆಯಿಂದ ಬೇಯಿಸಿಕೊಳ್ಳುತ್ತಿರುವುದು. ಇದೇ ಅವರ ಟ್ರಂಪ್ ಕಾರ್ಡ್.!

ಹೀಗೆ ಮಾಡುವ ಪ್ರಕ್ರಿಯೆಯಲ್ಲಿ ಕೊನೇಪಕ್ಷ ಒಂದು ಸಣ್ಣ ಮಾನವೀಯ ಕಾಮನ್‌ಸೆನ್ಸ್ ಅನ್ನೂ ಮರೆತು ವರ್ತಿಸುವುದು ದುರಂತ. ಬದುಕಿರುವವರನ್ನು ಸಾಯಿಸುವುದು, ಇಲ್ಲದಿರುವುದನ್ನು ಇದೇ ಎಂದು ಹೇಳುವುದು, ತಿರುಚಿ ವರದಿ ಮಾಡುವುದು, ಕೃತಕಬುದ್ಧಿಮತ್ತೆಯ ಮೂಲಕ ಕಾಂಟ್ರೋವರ್ಷಿಯಲ್ ಚಿತ್ರಗಳನ್ನು ಸೃಷ್ಟಿ ಮಾಡಿ ವಿವಾದವೆಬ್ಬಿಸುವುದು, ತಿರುಚಿದ ಚಿತ್ರದಿಂದ ವಿವಾದ ಹುಟ್ಟಿಸುವುದು ಅಥವಾ ಜಾತಿ, ಧರ್ಮ, ಸಿನಿಮಾ, ರಾಜಕೀಯ, ಅಭಿಮಾನ ಮುಂತಾದ ವಿಚಾರಗಳಲ್ಲಿ ಜನರನ್ನು ಕೆರಳಿಸುವಂತಹ ಹೆಡ್ ಲೈನ್ ಕೊಟ್ಟು ಸಮಾಜದಲ್ಲಿ ಅಶಾಂತಿ ಮೂಡಿಸುವುದು, ಹೇಳಿಕೆಯ ಪೂರ್ತಿ ಭಾಗ ಬಿಟ್ಟು ವಿವಾದಕ್ಕೀಡುಮಾಡುವ ಎರಡು ಸಾಲನ್ನೇ ವೈಭವೀಕರಿಸಿ ಅಪಾರ್ಥ ಮೂಡಿಸುವಂತೆ ಹರಡುವುದು....ಇವೆಲ್ಲವೂ ಥರ್ಡ್ ಕ್ಲಾಸ್ ಮೆಂಟಾಲಿಟಿಯವರ ಮೂಲ ಗುಣಲಕ್ಷಣಗಳು. !

ಅಧಿಕೃತ ಸುದ್ದಿಯೇ ಅಲ್ಲದ ಯಾವುದೇ ಸುದ್ದಿಯನ್ನು ಕೇವಲ ಸುದ್ದಿತೀಟೆಗಾಗಿ ಟಿ.ಆರ್.ಪಿಗಾಗಿ ಸೃಷ್ಟಿಸಿದ್ದನ್ನು , ಜಾಲತಾಣಗಳಲ್ಲಿ ಮನಬಂದಂತೆ ಹಂಚಿಕೊಳ್ಳುವ ಮುನ್ನ ಒಂದು ಸಣ್ಣಮಟ್ಟದ ವಿವೇಕವನ್ನು ನಮ್ಮಲ್ಲಿ ಜಾಗೃತವಾಗಿಟ್ಟುಕೊಳ್ಳುವುದು ಒಳ್ಳೆಯದು. ಇಲ್ಲವಾದಲ್ಲಿ ಅಂಥವರ ಸ್ವಾರ್ಥಕ್ಕೆ, ಪಾಪದ ಕೆಲಸಕ್ಕೆ ತನ್ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸಲಿಕ್ಕೆ ಅಮಾಯಕರಾದ ಸಾಮಾನ್ಯಜನರೂ ಪಾಲುದಾರರಾಗುವ ಅಪಾಯವಿದೆ.

ನಟ ಧರ್ಮೇಂದ್ರ ಆದಷ್ಟು ಬೇಗ ಗುಣಮುಖರಾಗಿ ಮೊದಲಿಂತಾಗಲಿ.


* ಮರೆಯುವ ಮುನ್ನ *

ಎಲ್ಲಿಂದಲೋ ಬಂದ ಯಾವುದೇ ಸುದ್ದಿಯನ್ನು, ಯಾವನೋ ತನ್ನ ಲಾಭಕ್ಕಾಗಿ ಸೃಷ್ಟಿಸಿರಬಹುದಾದ ಸುಳ್ಳು ಸುದ್ದಿಯನ್ನು ಹಿಂದೆ ಮುಂದೆ ನೋಡದೇ ಕುರುಡಾಗಿ ಫಾರ್ವರ್ಡ್ ಮಾಡುವ ಮುನ್ನ ಒಂದು ಬಾರಿ ಯೋಚಿಸುವ ಸಹನೆ ಎಲ್ಲರದ್ದಾಗುವ ಅಗತ್ಯವಿದೆ. ಈ ವಿಷಯಗಳಲ್ಲಿ ಬಹು ಜನರಲ್ಲಿರಬಹುದಾದ ಸಂಯಮದ ಕೊರತೆಯ ದೌರ್ಬಲ್ಯವೇ ಸುಳ್ಳುಸುದ್ದಿ ಸೃಷ್ಟಿಸುವ ಕಾರ್ಖಾನೆಗಳ ಶಕ್ತಿಯಾಗಿ ಆ ಮೂಲಕ ಗೊಂದಲದ- ಅಶಾಂತಿಯ ಸಮಾಜ ಸೃಷ್ಟಿಯಾಗಲು ನಾವೇ ಕಾರಣರಾಗುತ್ತಿದ್ದೇವೆ. ಹಾಗಾಗಿ ಈ ಬಗ್ಗೆ ಅತ್ಯಂತ ಎಚ್ಚರ ಅವಶ್ಯ.

ಅದರಲ್ಲೂ ಮತ್ತೊಬ್ಬರ ಸಾವಿನ ಅಥವಾ ಖಾಸಗಿ ವಿಚಾರಗಳನ್ನು ಹಂಚಿಕೊಳ್ಳುವ ಮುನ್ನ ಅದರ ಅಧಿಕೃತತೆಯನ್ನು ಖಚಿತಪಡಿಸಿಕೊಳ್ಳುವ ಕಿಂಚಿತ್ ತಾಳ್ಮೆ ಅಪೇಕ್ಷಣೀಯ. ಮತ್ತೊಬ್ಬರ ವೈಯಕ್ತಿಕ ಬದುಕಿನ ವಿಚಾರ ಶೇರ್ ಮಾಡುವ ಮುನ್ನ ಅವರು ಸೆಲೆಬ್ರಿಟಿಯೇ ಆಗಿರಲಿ ಅಥವಾ ಸಾಮಾನ್ಯರೇ ಆಗಿರಲೀ ಅವರಿಗೂ ಒಂದು ಖಾಸಗೀತನವೆಂಬುದು ಇರುತ್ತದೆಯೆಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಮತ್ತೊಬ್ಬರ ಖಾಸಗೀತನವನ್ನು ಗೌರವಿಸುವ ಕನಿಷ್ಠ ವಿವೇಕವಾದರೂ ನಮ್ಮೊಳಗೆ ಜಾಗೃತವಾಗಿಲ್ಲದಿದ್ದಲ್ಲಿ ನಮ್ಮ ವಿದ್ಯೆ, ಬುದ್ದಿ, ದುಡ್ಡು ಪೊಸಿಷನ್ನೂ ಎಲ್ಲವೂ ವ್ಯರ್ಥ. !

ನೀವು ಯಾವುದೇ ರಾಜಕೀಯ ಪಕ್ಷ ಅಥವಾ ಸಿದ್ಧಾಂತವನ್ನು ಬೆಂಬಲಿಸುವವರಾಗಿದ್ದರೂ, ಜನರೊಂದಿಗೆ ನಾವು ಬದುಕುತ್ತಿರುವ ಸಮಾಜವನ್ನು ಗೊಂದಲಕ್ಕೆ ದೂಡುವ ಸ್ವಾರ್ಥಪರ ಮೀಡಿಯಾಗಳು, ಜಾಲತಾಣಗಳ ಕಿಡಿಗೇಡಿ ಡಿಜಿಟಲ್ ಚಾನೆಲ್‌ಗಳು, ವರ್ಣರಂಜಿತ ಕಥೆಗಳನ್ನು ಸೃಷ್ಟಿಸುವ ಮೂಲಕ ವ್ಯೂಸ್ ಹಿಂದೆ ಬಿದ್ದಿರುವ ಅಯೋಗ್ಯ ಯೂಟ್ಯೂಬರ್ ಗಳು, ಕೃತಕಬುದ್ದಿಮತ್ತೆಯ ತಜ್ಞ ಫೇಕ್ ಸುದ್ದಿಶೂರರು, ಈ ಎಲ್ಲ ಎಲಿಮೆಂಟುಗಳ ಬಗ್ಗೆ ಜನತೆ ಸದಾ ಜಾಗೃತವಾಗಿದ್ದಲ್ಲಿ ಸಮಾಜ ನೆಮ್ಮದಿಯಾಗಿರಬಲ್ಲದು.

ಯೋಚಿಸಿ....!!



**ಹಿರಿಯೂರು ಪ್ರಕಾಶ್**

